ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಭಾರತದ ಎಡಗೈ ಸ್ಪಿನ್ನರ್ ಮಾನವ್ ಸುತಾರ್ ಅವರು ಇಂಗ್ಲಿಷ್ ಕೌಂಟಿ ಚಾಂಪಿಯನ್‌ಶಿಪ್‌ನಲ್ಲಿ ವಾರ್ವಿಕ್ ಶೈರ್ ಪರ ಮುಂದಿನ 2 ಸುತ್ತಿನ ಪಂದ್ಯಗಳನ್ನು ಆಡುವುದಕ್ಕೆ ಒಪ್ಪಂದ ಮಾಡಿಕೊಂಡಿದ್ದಾರೆ.



11 ಜೂನ್, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 92 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಅಲ್ಲಿ ನೀರಲ್ಲಿ ಸಮರ, ಇಲ್ಲಿ ನೀರಿಗಾಗಿ ಸಮರ » 2



ದೇಶ ಮುನ್ನಡೆಸಲು ಪ್ರಧಾನಿಗೆ ಮತ್ತಷ್ಟು ಶಕ್ತಿ ದೊರಕಲಿ » 3



ಪಿಸಿಸಿ ಅಧ್ಯಕ್ಷರಿಗೆ ಎಐಸಿಸಿ ತುರ್ತು ಬುಲಾವ್ » 4

## ಇಂದು ಪುಷ್ಪಗಿರಿ ಸಂಚಾರಿ ಆಸ್ಪತ್ರೆ ಉದ್ಘಾಟನೆ

• ಪ್ರಜೋದಯ ವರದಿ

**ಹಾಸನ :** ಹಳೇಬೀಡಿನ ಪುಷ್ಪಗಿರಿ ಉಚಿತ ಸಂಚಾರಿ ಆಸ್ಪತ್ರೆಯ ಉದ್ಘಾಟನಾ ಸಮಾರಂಭವನ್ನು ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜೂ. 11ರ ಗುರುವಾರ ಹಮ್ಮಿಕೊಳ್ಳಲಾಗಿದೆ.

ಮಧ್ಯಾಹ್ನ 2.30ಕ್ಕೆ ಆದಿಚುಂಚನ ಗಿರಿ ಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಸಂಚಾರಿ ಆಸ್ಪತ್ರೆ ಲೋಕಾರ್ಪಣೆಗೊಳಿಸುವರು. ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮಹಾಲಕ್ಷ್ಮಿ ಮಂಜಪ್ಪ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಮುಖ್ಯಸ್ಥ ಡಾ|| ಉಮೇಶ್ ಅವರು ಸಂಚಾರಿ ವಾಹನವನ್ನು ಕೊಡುಗೆಯಾಗಿ ನೀಡಿದ್ದಾರೆ.

ಕರ್ನಾಟಕ ಕಾಫಿ ಕಾರ್ಪೋರೇಷನ್ ಯೋಜನೆ ಸಂಯೋಜಕ ಯೋಗಾನಂದ ಜಾನೆಕೆರೆ ಹಾಗು ವಿವಿಧ ಗಣ್ಯರು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಗ್ರಾಮೀಣ ಭಾಗದಲ್ಲಿ ಆರೋಗ್ಯ ವ್ಯವಸ್ಥೆ ಸುಧಾರಿಸಲು ಸಂಚಾರಿ ಆಸ್ಪತ್ರೆ ನೆರವಾಗಲಿದ್ದು, ಈ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

# ರಾಜ್ಯಸಭೆ ಸದಸ್ಯನಾಗಬೇಕೆಂಬ ವ್ಯಾಮೋಹವಿಲ್ಲ

• ಪ್ರಜೋದಯ ವರದಿ

- ಪ್ರಧಾನಿ ಮೋದಿಯೊಂದಿಗೆ ಉತ್ತಮ ಬಾಂಧವ್ಯ
- ಕಾಂಗ್ರೆಸ್ ನಾಯಕರ ಹೇಳಿಕೆಗೆ ದೇವೇಗೌಡ ತಿರುಗೇಟು

**ಬೆಂಗಳೂರು:** ನನ್ನ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಡುವಿನ ಬಾಂಧವ್ಯ ರಾಜ್ಯಸಭೆ ಸ್ಥಾನವನ್ನು ಮೀರಿದ್ದು, 70 ವರ್ಷಗಳ ಸುದೀರ್ಘ ರಾಜಕೀಯ ಜೀವನ ಸವೆಸಿರುವ ನನಗೆ ರಾಜ್ಯಸಭೆ ಸದಸ್ಯನಾಗಬೇಕೆಂಬ ವ್ಯಾಮೋಹವಿಲ್ಲವೆಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಸ್ಪಷ್ಟಪಡಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಸಭಾ ಸ್ಥಾನಕ್ಕೆ ಬೇಡಿಕೆ ಇಟ್ಟಿರಲಿಲ್ಲ. ಆ ಬಗ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಸೇರಿ ದೆಹಲಿ ಬಿಜೆಪಿ ನಾಯಕರ ಜೊತೆ ಮಾತುಕತೆಯನ್ನೂ ನಡೆಸಿರಲಿಲ್ಲವೆಂದು ಹೇಳಿದರು.

ದೇವೇಗೌಡರಿಗೆ ರಾಜ್ಯಸಭೆಗೆ ಆಯ್ಕೆ ಮಾಡದೆ ಬಿಜೆಪಿ ಮೋಸ ಮಾಡಿದೆ ಎಂಬ ಕಾಂಗ್ರೆಸ್ ಹೇಳಿಕೆ ಹಾಗು ಮಾಧ್ಯಮಗಳ ವರದಿ ಕಪೋಲಕಲ್ಪಿತ. ಅದಕ್ಕಾಗಿ ಎರಡು ದಿನ ಟಿವಿಯನ್ನೇ ಬಂದ್ ಮಾಡಿದ್ದೆ. 18 ಶಾಸಕರನ್ನು ಹೊಂದಿರುವ ಜೆಡಿಎಸ್ ರಾಜ್ಯಸಭೆಗೆ ಹೇಗೆ ಆಯ್ಕೆ ಮಾಡುತ್ತದೆ. ದೇವೇಗೌಡರನ್ನು ಆಯ್ಕೆ ಮಾಡಬೇಕೆನ್ನುವುದು ಸ್ನೇಹಿತರು, ಹಿತೈಷಿಗಳು ಹಾಗು ಪಕ್ಷದ ಮುಖಂಡರು, ಕಾರ್ಯಕರ್ತರ ಆಶಯವಾಗಿತ್ತು ಅಷ್ಟೇ. ನಾನಾಗಲಿ, ಕೇಂದ್ರ ಸಚಿವ ಕುಮಾರಸ್ವಾಮಿ ಅವರಾಗಲಿ ಈ ಕುರಿತು ಯಾವುದೇ ಚರ್ಚೆ ನಡೆಸಿರಲಿಲ್ಲವೆಂದು ಸ್ಪಷ್ಟಪಡಿಸಿದರು.

ನನ್ನ ಮತ್ತು ಪ್ರಧಾನಿ ಮೋದಿ ಅವರ ನಡುವೆ ಉತ್ತಮ ಬಾಂಧವ್ಯ ಇದೆ. ಒಂದು ರಾಜ್ಯಸಭೆ ಸ್ಥಾನ ಇಂತಹ ಉತ್ತಮ ಬಾಂಧವ್ಯವನ್ನು ಹಾಳು ಮಾಡುತ್ತದೆ ಎಂದು ಯಾರಾದರೂ ಭಾವಿಸಿದ್ದರೆ ಅದು ಅವರ ಮೂರ್ಖತನ. ಒಂದು ಕಾಲದಲ್ಲಿ ನಾನು ಮೋದಿ ಅವರನ್ನು ಕಟುವಾಗಿ ಟೀಕಿಸಿದ್ದೆ ಎಂಬುದು ನಿಜ. ಆದರೆ,



ಕಳೆದ ಹಲವು ವರ್ಷಗಳಿಂದ ನಾನು ಅವರನ್ನು ಬಹಳಷ್ಟು ಅರ್ಥ ಮಾಡಿಕೊಂಡಿದ್ದೇನೆ. ಅವರಲ್ಲಿ ವಿಶ್ವಾಸ ಇರಿಸಿದ್ದೇನೆ. ಅವರ ಒಳ್ಳೆಯ ಕೆಲಸಗಳನ್ನು ಹೃದಯಪೂರ್ವಕವಾಗಿ ಶ್ಲಾಘಿಸಿದ್ದೇನೆಂದು ಹೇಳಿದರು.

ತಮ್ಮ ರಾಜಕೀಯ ಜೀವನದ ಆರಂಭದ ದಿನಗಳನ್ನು ಸ್ಮರಿಸಿದ ಗೌಡರು, ನಾನು ರಾಜಕಾರಣಕ್ಕೆ ಬಂದು ಎಷ್ಟು ವರ್ಷವಾಯಿತು ಎಂದು ಒಮ್ಮೆ ಯೋಚಿಸಿ. 1954-55 ರಿಂದಲೇ ನಾನು ಸಕ್ರಿಯ ರಾಜಕಾರಣದಲ್ಲಿದ್ದೇನೆ. ಅಂದು ಕೇವಲ ಗುತ್ತಿಗೆ ಕೆಲಸ ಮಾಡುತ್ತಿದ್ದ ನಾನು, ಅದರ ಜೊತೆ-ಜೊತೆಗೆ ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ರಾಜಕೀಯಕ್ಕೆ ಬಂದವನು. ಅಂದಿನಿಂದ ಇಂದಿನವರೆಗೆ ನಿರಂತರವಾಗಿ ಜನರ ಮಧ್ಯೆಯೇ ಇದ್ದೇನೆ. ಹಾಗಾಗಿ, ಇಂದು ಒಂದು ಸ್ಥಾನಕ್ಕಾಗಿ ನಾನು ಹಾತೊರೆಯುವ ಅಗತ್ಯವಿಲ್ಲ ಎಂದರು.

### ಸುಮ್ಮನೆ ಕೂರುವುದಿಲ್ಲ, ಪಕ್ಷ ಸಂಘಟಿಸುವೆ

ನಾನು ಸುಮ್ಮನೆ ಕೂರುವುದಿಲ್ಲ. ಪಕ್ಷದ ಬಲವರ್ಧನೆಗೆ ನನ್ನ ಶಕ್ತಿ ಮೀರಿ ಕೆಲಸ ಮಾಡುತ್ತೇನೆ. ರಾಜ್ಯ ಮತ್ತು ದೇಶದ ವಿಚಾರಗಳನ್ನು ಸಂಸತ್ತಿನ ಒಳಗೆ ಮತ್ತು ಹೊರಗೆ ನೇರವಾಗಿ ಮಾತನಾಡಿದ್ದೇನೆ. ನರೇಂದ್ರ ಮೋದಿ ಅವರ ಬಗ್ಗೆ ಭಾರತ ಅಷ್ಟೇ ಅಲ್ಲ ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಗೌರವಭಾವ ಇದೆ. ಅದನ್ನು ರಾಜಕೀಯ ಕಾರಣಕ್ಕಾಗಿ ಕಳೆದುಕೊಳ್ಳಲು ಬಯಸುವುದಿಲ್ಲ. ನಾನು ಸಂಸತ್ತಿನಲ್ಲಿ ಇರಲಿ, ಇಲ್ಲದಿರಲಿ ಮೋದಿ ಅವರ ನಡುವಿನ ಸಂಬಂಧಕ್ಕೆ ಧಕ್ಕೆ ಬರುವುದಿಲ್ಲ.

ಮೋದಿ ಅವರ ವಿಶ್ವಾಸದ ಮುಂದೆ ಇವರೆಲ್ಲರ ಟೀಕೆ-ಟಿಪ್ಪಣಿಗಳು ಬಹಳ ಸಣ್ಣವು. ಕೆಲವರು ನನ್ನ ಬಗ್ಗೆ ಕಾಳಜಿಯಿಂದ ಮಾತನಾಡುತ್ತಿದ್ದಾರೆ. ಬಹಳ ಅಪಮಾನವಾಯಿತು ಎಂದು ನೋವು ವ್ಯಕ್ತಪಡಿಸುತ್ತಿದ್ದಾರೆ. ಆದರೆ, ನನ್ನ ಹೆಸರು ಪರಿಗಣನೆಗೆ ಬರುತ್ತದೆ ಎಂದು ಮಾಧ್ಯಮಗಳಲ್ಲಿ ಪ್ರಚಾರವಾಗಿದ್ದು ಬಿಟ್ಟರೆ, ನಾನು ಆ ಬಗ್ಗೆ ಎಲ್ಲಿಯೂ ನನಗೆ ರಾಜ್ಯಸಭೆ ಸ್ಥಾನ ಬೇಕೆಂದು ಬೇಡಿಕೆ ಇಟ್ಟಿರಲಿಲ್ಲ. ಈ ಬಗ್ಗೆ ನಮ್ಮ ಪಕ್ಷದ ರಾಜ್ಯಾಧ್ಯಕ್ಷರು ಹಾಗು ಕೇಂದ್ರ ಸಚಿವರು ಆಗಿರುವ ಕುಮಾರಸ್ವಾಮಿ ಅವರು ಸ್ಪಷ್ಟವಾಗಿಯೇ ಹೇಳಿದ್ದಾರೆ. ಇದರಲ್ಲಿ ಮತ್ತೊಮ್ಮೆ ನಾನು ಹೇಳುವಂತಹದ್ದು ಏನು ಇಲ್ಲವೆಂದು ಸ್ಪಷ್ಟಪಡಿಸಿದರು.

ಒಂದು ವೇಳೆ ರಾಜ್ಯಸಭೆಗೆ ಸ್ಪರ್ಧಿಸುವ ಆಸಕ್ತಿ ನನಗೆ ಇದ್ದಿದ್ದರೆ ಮೇ 26ರಂದು ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕಾಗಿ ನವದೆಹಲಿಗೆ ಹೋಗಿದ್ದಾಗ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸುತ್ತಿದ್ದೆ ಎಂದು ತಿಳಿಸಿದರು.


## 200 ವೈದ್ಯರ ಖಾಯಂಗೆ ಸರ್ಕಾರ ಸಮ್ಮತಿ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯಾದ್ಯಂತ ಕಾಡುತ್ತಿರುವ ವೈದ್ಯರ ಸಮಸ್ಯೆ ನೀಗಿಸಲು ಮಹತ್ವದ ಕ್ರಮ ಕೈಗೊಂಡಿರುವ ರಾಜ್ಯ ಸರ್ಕಾರ 200 ವೈದ್ಯರ ಖಾಯಂಗೆ ಮುಂದಾಗಿದೆ.

ಆರೋಗ್ಯ ಸಚಿವರಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆ ಸಚಿವ ಯು.ಟಿ. ಖಾದರ್ ಅವರು ಮಹತ್ವದ ತೀರ್ಮಾನಕ್ಕೆ ಮುಂದಾಗಿದ್ದಾರೆ. ರಾಜ್ಯದಲ್ಲಿ ದಶಕಗಳಿಂದ ಕಾಡುತ್ತಿರುವ ವೈದ್ಯರ ಕೊರತೆ ನೀಗಿಸಲು ಸಚಿವರು ಮೊದಲ ಪ್ರಗತಿ ಪರಿಶೀಲನಾ ಸಭೆಯಲ್ಲೇ ಮಹತ್ವದ ಸುಳಿವು ನೀಡಿದ್ದಾರೆ.

ಹಲವು ವರ್ಷಗಳಿಂದ ಕನಿಷ್ಠ ವೇತನಕ್ಕೆ ಕೆಲಸ ಮಾಡುತ್ತಿರುವ ಗುತ್ತಿಗೆ ವೈದ್ಯರಿಗೆ ಈ ಪ್ರಯೋಜನ ದೊರೆಯಲಿದೆ. 5 ವರ್ಷ ಸೇವೆ ಪೂರ್ಣಗೊಳಿಸಿರುವ ಮತ್ತು ಉತ್ತಮ ಕೆಲಸ ಮಾಡಿರುವ ಗುತ್ತಿಗೆ ನೌಕರರನ್ನು ಹಂತ ಹಂತವಾಗಿ ಖಾಯಂಗೊಳಿಸಲು ತೀರ್ಮಾನಿಸ ಲಾಗಿದೆ. 200 ವೈದ್ಯರನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಪರೀಕ್ಷೆ ಮೂಲಕ ನೇರ ನೇಮಕಾತಿ ಮಾಡಿ ವಾರದೊಳಗೆ ಆದೇಶ ಪತ್ರ ನೀಡಲು ನಿರ್ಧರಿಸಲಾಗಿದ್ದು, ಅದಕ್ಕೆ ಆರ್ಥಿಕ ಇಲಾಖೆಯ ಒಪ್ಪಿಗೆಯೂ ಸಿಕ್ಕಿದೆ.



ರಾಜ್ಯದಲ್ಲಿ 1280 ವೈದ್ಯರು, 924 ತಜ್ಞ ವೈದ್ಯರು ಹಾಗು 892 ನರ್ಸ್‌ಗಳ ಕೊರತೆ ಇದೆ. ಅದನ್ನು ಸರಿಪಡಿಸಲು ತಕ್ಷಣದ ನೇಮಕಾತಿಗೆ ಸಚಿವರು ಚಾಲನೆ ನೀಡಿದ್ದಾರೆ. ಇನ್ನು ಕೆಇಎ ಮೂಲಕವೇ 400 ನರ್ಸ್, 400 ಫಾರ್ಮಸಿಸ್ಟ್ ಹಾಗು 400 ಲ್ಯಾಬ್ ಟೆಕ್ನಿಷಿಯನ್‌ಗಳನ್ನು ಖಾಯಂ ಆಗಿ ಭರ್ತಿ ಮಾಡಿಕೊಳ್ಳಲಾಗುವುದೆಂದು ಹೇಳಿದ್ದಾರೆ.

ವೈದ್ಯರ ಕೊರತೆಯಿಂದ ಆರೋಗ್ಯ ಕ್ಷೇತ್ರದಲ್ಲಿ ಭಾರೀ ಸಮಸ್ಯೆಗಳು ತಲೆದೋರಿದ್ದವು. ಗ್ರಾಮೀಣ ಭಾಗದಲ್ಲಿ ಜನರು ಚಿಕಿತ್ಸೆಗಾಗಿ ದೂರದ ಪಟ್ಟಣ ಅಥವಾ ನಗರ ಪ್ರದೇಶಗಳಿಗೆ ತೆರಳಬೇಕಿತ್ತು. 200 ವೈದ್ಯರ ಖಾಯಂ ಆದೇಶದಿಂದ ಸ್ವಲ್ಪ ಬದಲಾವಣೆ ಯಾಗುವ ನಿರೀಕ್ಷೆ ಹುಟ್ಟಿದೆ.

# ಇಂಧನ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

### ಪ್ರಧಾನ ಮಂತ್ರಿ ನರೇಂದ್ರ ಮೋದಿ ಪ್ರತಿಕೃತಿ ದಹಿಸಿ ಆಕ್ರೋಶ

• ಪ್ರಜೋದಯ ವರದಿ

**ಹಾಸನ:** ದೇಶಾದ್ಯಂತ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರುವ ಕೇಂದ್ರ ಸರ್ಕಾರದ ಕ್ರಮ ಖಂಡಿಸಿ ಸಿಪಿಐ(ಎಂ) ವತಿಯಿಂದ ಬುಧವಾರ ಪ್ರತಿಭಟನೆ ನಡೆಯಿತು.

ನಗರದ ಎನ್.ಆರ್.ವೃತ್ತದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ಪಂಚ ರಾಜ್ಯ ಚುನಾವಣೆ ಸಂದರ್ಭದಲ್ಲಿ ಸಾಕಷ್ಟು ಇಂಧನ ದಾಸ್ತಾನಿದ್ದು, ಜನರು ಆತಂಕ ಪಡಬೇಕಿಲ್ಲವೆಂದು ಹೇಳಿದ್ದ ಸರ್ಕಾರ, ಫಲಿತಾಂಶ ಹೊರಬಂದ ತಕ್ಷಣ ಇಂಧನ ದರ ಏರಿಕೆ ಮಾಡಿ ಜನ ವಿರೋಧಿ ನಡೆ ತೋರುತ್ತಿದೆ ಎಂದು ದೂರಿದರು.

ಒಂದು ಲೀಟರ್ ಪೆಟ್ರೋಲ್ ಬೆಲೆ 110.57 ರೂ, ಒಂದು ಲೀಟರ್ ಡೀಸೆಲ್ ಬೆಲೆ 98.80 ರೂ, 14 ಕೆಜಿ ಗೃಹ ಬಳಕೆಯ ಗ್ಯಾಸ್ ಸಿಲೆಂಡರ್ ಬೆಲೆ 968 ರೂ, ಇನ್ನೂ ವಾಣಿಜ್ಯ ಬಳಕೆಯ 19 ಕೆಜಿಯ ಗ್ಯಾಸ್




ಸಿಲೆಂಡರ್ ಬೆಲೆಯು 3,315 ರೂ.ಗೆ ಹೆಚ್ಚಳವಾಗಿದೆ. ರೈತರು, ಕಾರ್ಮಿಕರ ಮತ್ತು ಜನಸಾಮಾನ್ಯರ ಆದಾಯದಲ್ಲಿ ಯಾವುದೇ ರೀತಿಯ ಏರಿಕೆ ಕಾಣದಿದ್ದಾಗ ಈ ಬೆಲೆ ಏರಿಕೆ ಬದುಕನ್ನು ದುಸ್ತರಗೊಳಿಸುತ್ತದೆ. ಕೂಡಲೇ ಅಗತ್ಯ ಬೆಲೆ ಏರಿಕೆಯನ್ನು ವಾಪಾಸ್ ಪಡೆಯಬೇಕೆಂದು ಆಗ್ರಹಿಸಿದರು.

ಅಮೇರಿಕಾ-ಇಸ್ರೇಲ್ ದಾಳಿಗಳ ಪರಿಣಾಮ ಪಶ್ಚಿಮ ಏಷ್ಯಾದಲ್ಲಿ ಬಿಕ್ಕಟ್ಟು ಸೃಷ್ಟಿಯಾಗಿದ್ದು, ಯುದ್ಧೋನ್ಮಾದವನ್ನು ತಡೆಯಲು ಇತರೆ ರಾಷ್ಟ್ರಗಳೊಂದಿಗೆ ಕೈಜೋಡಿಸಿ ಶಾಂತಿ ಪ್ರಯತ್ನ ನಡೆಸಬೇಕಾಗಿತ್ತು. ಆದರೆ, ಪ್ರಧಾನಿ ನರೇಂದ್ರ ಮೋದಿ ಅಮೇರಿಕಾದ ಹಿಂಬಾಲಕ ನಾಯಕನಂತೆ ವರ್ತಿಸಿ, ಇಸ್ರೇಲ್ ಪರ ನಿಲುವು ತೆಗೆದುಕೊಳ್ಳುತ್ತಿದ್ದಾರೆ. ಭಾರತದಲ್ಲಿ ಜನಸಾಮಾನ್ಯರ ಬದುಕಿನ ಮೇಲೆ ಹೆಚ್ಚುವರಿ ಹೊರೆ ಹಾಕಲಾಗುತ್ತಿದೆ. ಜನಹಿತಕ್ಕಿಂತ ಚುನಾವಣಾ ರಾಜಕೀಯವೇ ಬಿಜೆಪಿಗೆ ಮುಖ್ಯವಾಗಿದೆ ಎಂದು ದೂರಿದರು. ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಹೆಚ್.ಆರ್. ನವೀನ್ ಕುಮಾರ್ ಇತರರಿದ್ದರು.

# ಜನನ-ಮರಣ ಪ್ರಮಾಣ ಪತ್ರ ಪಡೆಯಲು ಹರಸಾಹಸ

• ಪ್ರಜೋದಯ ವರದಿ

**ಹಾಸನ:** ಮಹಾನಗರ ಪಾಲಿಕೆಯಲ್ಲಿ ಜನನ-ಮರಣ ಪ್ರಮಾಣ ಪತ್ರ ವಿತರಣೆಗೆ ಭಾರೀ ವಿಳಂಬವಾಗುತ್ತಿರುವ ಪರಿಣಾಮ ಸಾರ್ವಜನಿಕರು ವಾರಗಟ್ಟಲೇ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಒಂದು ತಿಂಗಳ ಹಿಂದೆ ಅರ್ಜಿ ಸಲ್ಲಿಸಿ ಈಗ ಕೇಳಿದರೂ ಇನ್ನೂ ಬಂದಿಲ್ಲವೆನ್ನುತ್ತಾರೆ. ತಿದ್ದುಪಡಿಗಳಿದ್ದರೆ ಸರಿಪಡಿಸಿಕೊಡುವುದಿಲ್ಲ. ವಿಳಂಬಕ್ಕೆ ಕಾರಣ ಕೇಳಿದರೆ ಸಿಬ್ಬಂದಿ ಇಲ್ಲ, ವಿದ್ಯುತ್ ಕಡಿತದ ಸಬೂಬು ಹೇಳುತ್ತಾರೆ. ದುಡ್ಡು ಕೊಟ್ಟವರಿಗೆ ಎರಡೇ ನಿಮಿಷದಲ್ಲಿ ಪ್ರಮಾಣ ಪತ್ರ ಕೊಡುತ್ತಾರೆ. ಹೀಗಾದರೆ ಬಡವರ ಪರಿಸ್ಥಿತಿ ಏನಾಗಬೇಕೆಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಪ್ರಮಾಣ ಪತ್ರ ಅರ್ಜಿ ಸ್ವೀಕಾರ, ಸೀಲ್ ಹಾಕಲು, ತಿದ್ದುಪಡಿ, ಶುಲ್ಕ ಪಾವತಿ ಎಲ್ಲದಕ್ಕೂ ಒಂದೇ ಕೌಂಟರ್ ಮಾಡಿರುವುದರಿಂದ ಸಮಸ್ಯೆಯಾಗುತ್ತಿದೆ. ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿದರೆ ತ್ವರಿತಗತಿಯಲ್ಲಿ ಅರ್ಜಿ ವಿಲೇವಾರಿ ಮಾಡಬಹುದು ಎಂದರು.

### ಮಹಾನಗರ ಪಾಲಿಕೆಯಲ್ಲಿ ನಿಧಾನಗತಿ ಕೆಲಸ | ಸಾರ್ವಜನಿಕರ ಆಕ್ರೋಶ



**ಅಸಹಾಯಕತೆ ವ್ಯಕ್ತಪಡಿಸಿದ ನೌಕರ**

ಹಾಸನ ನಗರಸಭೆ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ ಬಳಿಕ ಅರ್ಜಿಗಳ ಸಂಖ್ಯೆ ಹೆಚ್ಚಾಗಿದೆ. ನಿತ್ಯ ಕನಿಷ್ಠ 10 ಮರಣ, 100ಕ್ಕೂ ಹೆಚ್ಚು ಜನನ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಕೆಯಾಗುತ್ತಿವೆ. ಈ ವಿಭಾಗದಲ್ಲಿ ಖಾಯಂ ಸಿಬ್ಬಂದಿ ಒಬ್ಬನೇ ಇದ್ದು, ಜನದಟ್ಟಣೆ ಹಿನ್ನಲೆ ನಾಲ್ಕು ದಿನಗಳ ಹಿಂದೆ ಹೊರಗುತ್ತಿಗೆ ಯಲ್ಲಿ ಇಬ್ಬರು ಸಿಬ್ಬಂದಿ ನಿಯೋಜಿಸ ಲಾಗಿದೆ. ನಾನು ಶಕ್ತಿ ಮೀರಿ ಕೆಲಸ ಮಾಡುತ್ತಿದ್ದೇನೆಂದು ನೌಕರ ಕುಮಾರ್ ಅಸಹಾಯಕತೆ ವ್ಯಕ್ತಪಡಿಸಿದರು.

ಲಾಗಿನ್ ಒಂದೇ ಇರುವುದರಿಂದ ಪ್ರತ್ಯೇಕ ಕೌಂಟರ್ ತೆರೆಯಲು ಸಾಧ್ಯವಿಲ್ಲ. ಹೊಸ ಅರ್ಜಿಗಿಂತ ತಿದ್ದುಪಡಿಗಾಗಿ ಬರುವವರ ಸಂಖ್ಯೆ ಹೆಚ್ಚಿದೆ. ಜನರು ತಾಳ್ಮೆಯಿಂದ ಇದ್ದರೆ ಕೆಲಸ ಮಾಡಿಕೊಡಬಹುದೆಂದರು.

**ಗ್ಯಾರಂಟಿ ಬೇಕಿಲ್ಲ-ಯುಪಿಎಸ್ ಕೊಡಿ**

ಸರದಿ ಸಾಲಿನಲ್ಲಿ ನಿಂತಿದ್ದ ಜನರು ಜನನ ಮತ್ತು ಮರಣ ಪ್ರಮಾಣಕ್ಕಾಗಿ ಅನುಭವಿಸುತ್ತಿರುವ ತೊಂದರೆಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು. ಅರಕಲಗೂಡು, ಕುಶಾಲನಗರ, ತುಮಕೂರು ಹೀಗೆ ನಾನಾ ಭಾಗದಿಂದ ಬಂದಿದ್ದೇವೆ. ಉಪಾಹಾರ, ಊಟ ತಿಂಡಿ ಮಾಡದೆ ಸಾಲಿನಲ್ಲಿ ನಿಂತಿದ್ದೇವೆ. ವಿಳಂಬಕ್ಕೆ ಕಾರಣ ಕೇಳಿದರೆ ಕರೆಂಟ್ ಇಲ್ಲ ಎನ್ನುತ್ತಾರೆ. ರಾಜ್ಯ ಸರ್ಕಾರ ಬಿಟ್ಟಿ ಭಾಗ್ಯಗಳ ಬದಲಿಗೆ ಸರ್ಕಾರಿ ಕಚೇರಿಗಳಿಗೆ ಹೆಚ್ಚುವರಿ ಸಿಬ್ಬಂದಿ, ಯುಪಿಎಸ್, ಜನರೇಟರ್ ಸೇರಿ ಇತರ ಮೂಲಸೌಕರ್ಯ ಕಲ್ಪಿಸಿದರೆ ಅನುಕೂಲವಾಗುತ್ತದೆಂದರು.

**ಪರಿಸ್ಥಿತಿ ತಿಳಿಗೊಳಿಸಿದ ಪೌರಾಯುಕ್ತ**

ಕೌಂಟರ್‌ನಲ್ಲಿ ಗಲಾಟೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೌರಾಯುಕ್ತ ಆರ್.ಕೃಷ್ಣಮೂರ್ತಿ ಅವರು ಸರದಿ ಸಾಲಿನಲ್ಲಿ ನಿಲ್ಲುವಂತೆ ಸೂಚಿಸಿ ತ್ವರಿತ ಗತಿಯಲ್ಲಿ ಅರ್ಜಿ ವಿಲೇವಾರಿಗೆ ಸೂಚಿಸಿದರು.

ಜೂನ್-ಜುಲೈನಲ್ಲಿ ಶಾಲಾ ದಾಖಲಾತಿ ಇರುವುದರಿಂದ ಮಕ್ಕಳ ಜನನ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುವವರ ಸಂಖ್ಯೆ ಹೆಚ್ಚಿರುತ್ತದೆ. ಸಿಬ್ಬಂದಿ ಕೊರತೆಯೂ ಹೆಚ್ಚಿದೆ. ಆದಷ್ಟು ಬೇಗ ಅರ್ಜಿ ವಿಲೇವಾರಿಗೆ ಕ್ರಮ ವಹಿಸಲಾಗುವುದು. ಜನರು ಸಹ ತಾಳ್ಮೆಯಿಂದ ವರ್ತಿಸಬೇಕೆಂದು ಮನವಿ ಮಾಡಿದರು.

### ವಯಸ್ಕರು, ಮಹಿಳೆಯರು ಹೈರಾಣ

ಅಗತ್ಯ ದಾಖಲಾತಿಗಾಗಿ ವಯಸ್ಕರು, ಮಹಿಳೆಯರು ನಿತ್ಯ ಬರುತ್ತಿದ್ದು, ನಿಧಾನ ಗತಿಯ ಕೆಲಸದಿಂದ ತೊಂದರೆ ಅನುಭವಿಸುವಂತಾಗಿದೆ. ಅನಾರೋಗ್ಯ ಸಮಸ್ಯೆಯಿಂದ ಬಳಲುವ ಹಿರಿಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಬೇಕು. ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿಗಳಿಲ್ಲದೇ ಅಧಿಕಾರಿಗಳದ್ದೇ ಕಾರುಬಾರು ಎನ್ನುವಂತಾಗಿದೆ. ಜನನ ಪ್ರಮಾಣ ಪತ್ರಕ್ಕೆ ಇಷ್ಟು ತೊಂದರೆಯಾದರೆ ಇ-ಸ್ವತ್ತು ಮತ್ತಿತರ ದಾಖಲಾತಿ ಪಡೆಯಲು ಎಷ್ಟು ತೊಂದರೆ ಇದೆ ಎಂಬುದನ್ನು ಅರಿಬಹುದೆಂದು ಅರಕಲಗೂಡಿನ ವ್ಯಕ್ತಿಯೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

# ಜಮೀರ್ ಅಹಮ್ಮದ್‌ಗೆ ಸಚಿವ ಸ್ಥಾನ ನೀಡುವಂತೆ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಶಾಸಕ ಜಮೀರ್ ಅಹಮ್ಮದ್ ಖಾನ್ ಅವರಿಗೆ ಉಪಮುಖ್ಯಮಂತ್ರಿ ಹಾಗು ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿ ಬುಧವಾರ ಜಿಲ್ಲಾ ಮುಸ್ಲಿಂ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಮೀಪದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಜಮಾಯಿಸಿದ ಪ್ರತಿಭಟನಾಕಾರರು ಜಮೀರ್ ಅಹ್ಮದ್ ಪರವಾಗಿ ಘೋಷಣೆ ಕೂಗಿದರು. 2023ರ ವಿಧಾನ ಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರಲು ಮುಸ್ಲಿಂ ಸಮುದಾಯ ಕಾರಣ. ರಾಜ್ಯದ ಮುಸ್ಲಿಂ ಜನಸಂಖ್ಯೆ 84 ಲಕ್ಷಕ್ಕೂ ಅಧಿಕವಾಗಿದ್ದರೂ ಹೊಸ ಸಚಿವ ಸಂಪುಟದಲ್ಲಿ ಕೇವಲ




ಒಬ್ಬರಿಗೆ ಅವಕಾಶ ಕಲ್ಪಿಸಲಾಗಿದೆ. ಕಾಂಗ್ರೆಸ್ ಪಕ್ಷಕ್ಕೆ ಸಮುದಾಯ ನಿರಂತರವಾಗಿ ಬೆಂಬಲ ನೀಡುತ್ತಿದ್ದು, ಅದರ ಪ್ರತಿಫಲವಾಗಿ ಆಡಳಿತದಲ್ಲಿ ಸೂಕ್ತ ಪ್ರಾತಿನಿಧ್ಯ ದೊರೆಯಬೇಕೆಂದು ಆಗ್ರಹಿಸಿದರು.

ಹಿರಿತನ ಹಾಗು ಅನುಭವದ ಆಧಾರದ ಮೇಲೆ ಸಮುದಾಯದ ಕನಿಷ್ಠ ನಾಲ್ವರು ಶಾಸಕರಿಗೆ ಸಚಿವ ಸ್ಥಾನ ನೀಡಬೇಕು. ಜೊತೆಗೆ ಜಮೀರ್ ಅಹ್ಮದ್ ಖಾನ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು.

ಕಾಂಗ್ರೆಸ್ ಪಕ್ಷಕ್ಕೆ ಜಮೀರ್ ಅವರ ಕೊಡುಗೆ ಸಾಕಷ್ಟಿದೆ. ಸಿದ್ದರಾಮಯ್ಯ

» ನಾಲ್ಕನೇ ಪುಟದಲ್ಲಿ

## ನಾಪತ್ತೆಯಾಗಿದ್ದ ಮೂವರು ವಿದ್ಯಾರ್ಥಿಗಳು ಪತ್ತೆ

• ಪ್ರಜೋದಯ ವರದಿ

**ಹಾಸನ:** ನಾಪತ್ತೆಯಾಗಿದ್ದ ಮೂವರು ವಿದ್ಯಾರ್ಥಿಗಳು ಬೆಂಗಳೂರಿನ ರೈಲ್ವೆ ನಿಲ್ದಾಣದಲ್ಲಿ ಬುಧವಾರ ಪತ್ತೆಯಾಗಿದ್ದು, ಸುರಕ್ಷಿತವಾಗಿ ಪೋಷಕರಿಗೆ ಒಪ್ಪಿಸಲಾಗಿದೆ.

ತಾಲ್ಲೂಕಿನ ಸೌದ್ರಳ್ಳಿ ಗ್ರಾಮದ ಪ್ರಸನ್ನ, ದೊಡ್ಡಬಸವನಹಳ್ಳಿ ಅಮೃತ್ ಹಾಗು ಕಿತ್ತಾನೆ ಗಡಿಯ ಮೋಹನ್ ಸೋಮವಾರ ಹಾಸನದಿಂದ ಮೈಸೂರಿಗೆ ತೆರಳಿ, ಬಳಿಕ ರೈಲಿನಲ್ಲಿ ಬೆಂಗಳೂರಿಗೆ ತೆರಳಿದ್ದರು. ಬೆಂಗಳೂರಿನಲ್ಲಿ ಕೆಲ ಸಮಯ ಅಲೆದಾಡಿದ ಅವರು, ತಮ್ಮ ಬಳಿ ಇದ್ದ ಹಣ ಖಾಲಿಯಾದ ನಂತರ ರೈಲ್ವೆ ನಿಲ್ದಾಣಕ್ಕೆ ಬಂದಿದ್ದರು. ಅನುಮಾನಾಸ್ಪದವಾಗಿ ಕಾಲ ಕಳೆಯುತ್ತಿದ್ದ ಮೂವರು ಬಾಲಕರನ್ನು ರೈಲ್ವೆ ಪೊಲೀಸರು ವಿಚಾರಣೆ ನಡೆಸಿದಾಗ ಹಾಸನ ಜಿಲ್ಲೆಯವರೆಂಬುದು ತಿಳಿದುಬಂದಿದೆ.


ನಂತರ ಸ್ಥಳೀಯ ಪೊಲೀಸರಿಗೆ ಮಕ್ಕಳನ್ನು ಒಪ್ಪಿಸಲಾಯಿತು. ಮೂವರನ್ನೂ ಪೋಷಕರಿಗೆ ಸುರಕ್ಷಿತವಾಗಿ ಒಪ್ಪಿಸಲಾಗಿದೆ. ಆತಂಕದಲ್ಲಿದ್ದ ಕುಟುಂಬಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ. ಮಕ್ಕಳ ಚಲನವಲನದ ಬಗ್ಗೆ ಹೆಚ್ಚಿನ ಗಮನ ವಹಿಸುವಂತೆ ಪೋಷಕರಿಗೆ ಪೊಲೀಸರು ಸಲಹೆ ನೀಡಿದ್ದಾರೆ.

# ಕರುಗಳನ್ನು ಅಟ್ಟಾಡಿಸಿದ ಮರಿಯಾನೆ

• ಪ್ರಜೋದಯ ವರದಿ

**ಸಕಲೇಶಪುರ:** ಗುಂಪಿನಿಂದ ಬೇರ್ಪಟ್ಟಿದ್ದ ಮರಿಯಾನೆ ರಸ್ತೆ ದಾಟುವ ವೇಳೆ ಕರುಗಳನ್ನು ಅಟ್ಟಾಡಿಸಿದ ಘಟನೆ ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮದ ಸಮೀಪ ನಡೆದಿದೆ.

ಮರಿಯಾನೆ ಕಾಫಿ ತೋಟದಿಂದ ಮತ್ತೊಂದು ಕಾಫಿ ತೋಟದತ್ತ ತೆರಳಲು ರಸ್ತೆ ದಾಟುತ್ತಿದ್ದ ವೇಳೆ ರಸ್ತೆಯಲ್ಲಿ ನಾಲ್ಕೈದು ಕರುಗಳು ಸಾಗುತ್ತಿದ್ದು, ಈ ಸಂದರ್ಭದಲ್ಲಿ ಮರಿಯಾನೆ ಘೀಳಿಡುತ್ತಾ ಕರುಗಳತ್ತ ಧಾವಿಸಿದೆ. ಬೆದರಿದ ಕರುಗಳು ಓಡಿ ಹೋಗಿದ್ದು, ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಬಳಿಕ ಕಾಫಿ ತೋಟದ ಗೇಟ್ ತಳ್ಳಿ ತೋಟದೊಳಗೆ ತೆರಳಿದೆ. ಈ



ದೃಶ್ಯವನ್ನು ಸ್ಥಳೀಯರು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ.

ಹಲವು ದಿನಗಳಿಂದ ಸಕಲೇಶಪುರ ಭಾಗದಲ್ಲಿ ನಿರಂತರವಾಗಿ ಕಾಡಾನೆ ಭೀಮ ಮತ್ತೆ ಜನನಿಬಿಡ ಪ್ರದೇಶದಲ್ಲಿ ಕಾಣಿಸಿ ಕೊಂಡಿದೆ. ತಾಲ್ಲೂಕಿನ ಕೆಸಗುಲಿ ಗ್ರಾಮದಲ್ಲಿ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ಭೀಮ ಸಂಚರಿಸಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

ಭೀಮನ ನಿರಂತರ ಚಲನವಲನ ಅರಣ್ಯ ಇಲಾಖೆ ಹಾಗು ಇಟಿಎಫ್ ಸಿಬ್ಬಂದಿಗೆ ಸವಾಲಾಗಿ ಪರಿಣಮಿಸಿದ್ದು, ಕಾಡಾನೆ ಮೇಲೆ ನಿಗಾ ವಹಿಸಲಾಗಿದೆ. ಗ್ರಾಮಸ್ಥರು ಹಾಗು ವಾಹನ ಸವಾರರು ಕಾಡಾನೆಗಳು ಕಾಣಿಸಿಕೊಳ್ಳುವ ಪ್ರದೇಶಗಳಲ್ಲಿ ಎಚ್ಚರಿಕೆಯಿಂದ ಸಂಚರಿಸುವಂತೆ ಅರಣ್ಯ ಇಲಾಖೆ ಮನವಿ ಮಾಡಿದ್ದು, ಸುರಕ್ಷತಾ ಕ್ರಮಗಳನ್ನು ಪಾಲಿಸುವುದು ಅಗತ್ಯವಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

### ಗ್ರಾಮೀಣ ಕುಡಿಯುವ ನೀರು ಇಲಾಖೆ ವರದಿ | ಪರೀಕ್ಷಾ ಗುರಿ ಹೆಚ್ಚಿಸಿದ ಸರ್ಕಾರ

# ಜಿಲ್ಲೆಯ 2 ಗ್ರಾಮಗಳ ನೀರು ಸೇವನೆಗೆ ಯೋಗ್ಯವಲ್ಲ

-ಮಲ್ಲಿಕಾರ್ಜುನ ಕೊಚ್ಚರಗಿ


• ಪ್ರಜೋದಯ ವರದಿ

**ಹಾಸನ:** ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಜಿಲ್ಲಾದ್ಯಂತ ಕುಡಿಯುವ ನೀರಿನ ಗುಣಮಟ್ಟ ಪರೀಕ್ಷೆ ನಡೆಯುತ್ತಿದ್ದು, ಚನ್ನರಾಯಪಟ್ಟಣ ತಾಲ್ಲೂಕಿನ ಎರಡು ಗ್ರಾಮಗಳ ನೀರು ಸೇವನೆಗೆ ಯೋಗ್ಯವಲ್ಲವೆಂಬ ವರದಿ ಬಂದಿದೆ.

ಜಂಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಲಿಕೆರೆ ಹಾಗು ಕಾರೆಕೆರೆ ಗ್ರಾಮದಲ್ಲಿ ಬೋರವೆಲ್ ನೀರು ಕುಡಿಯಲು ಅನರ್ಹವೆಂದು ವರದಿ ಬಹಿರಂಗಪಡಿಸಿದೆ. ಗ್ರಾಮಸ್ಥರಿಗೆ ಕುಡಿಯುವ ನೀರಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ಅಧಿಕಾರಿಗಳು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗೆ ನಿರ್ದೇಶನ ನೀಡಿದ್ದಾರೆ.

**ಪರೀಕ್ಷೆ ಗುರಿ ಹೆಚ್ಚಿಸಿದ ಸರ್ಕಾರ**

ಸ್ವಚ್ಛ ಹಾಗು ಸಿಹಿಯಾಗಿರುವ ನೀರು ಶುದ್ಧವೆಂದು ಕುಡಿಯುವುದು ವಾಡಿಕೆ. ಆ ನೀರು ಕುಡಿಯಲು ಯೋಗ್ಯವೇ ಎಂಬುದನ್ನು ಪರೀಕ್ಷಿಸುವುದು ಅಷ್ಟೇ ಮುಖ್ಯವಾಗಿದೆ. ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ನೀರಿನ ಪರೀಕ್ಷೆಗೆ ಕಟ್ಟುನಿಟ್ಟಿನ ಆದೇಶ ನೀಡಿದೆ. ಈ ದಿಶೆಯಲ್ಲಿ ಪರಿಪೂರ್ಣತೆಗಾಗಿ ಪರೀಕ್ಷಾ ಗುರಿಯನ್ನು ಹೆಚ್ಚಿಸಲಾಗಿದೆ. 2025ನೇ ಸಾಲಿನಲ್ಲಿ ಜಿಲ್ಲೆಗೆ 22 ಸಾವಿರ ಪರೀಕ್ಷೆಗಳ ಗುರಿ ನೀಡಲಾಗಿತ್ತು. ಆದರೆ ಈ ವರ್ಷ 1.15 ಲಕ್ಷ ಪರೀಕ್ಷಾ ಗುರಿ ನೀಡಲಾಗಿದೆ. ಕಳೆದ ಏಪ್ರಿಲ್‌ನಿಂದ ಈ ವರೆಗೆ 19,960 ಪರೀಕ್ಷೆಗಳು ನಡೆದಿದ್ದು, ಅದರಲ್ಲಿ ಜಂಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎರಡು ಗ್ರಾಮಗಳಲ್ಲಿನ ನೀರು ಕುಡಿಯಲು ಯೋಗ್ಯವಲ್ಲವೆಂಬುದು ದೃಢಪಟ್ಟಿದೆ.



ಪರೀಕ್ಷಾ ವಿಧಾನ

ರಾಜ್ಯ ಸರ್ಕಾರದಿಂದಲೇ ಪರೀಕ್ಷಾ ಕಿಟ್‌ಗಳನ್ನು ನೀಡಲಾಗುತ್ತಿದ್ದು, ಖಾಸಗಿ ಕಂಪನಿಗಳು ಜವಾಬ್ದಾರಿ ವಹಿಸಿಕೊಂಡಿರುತ್ತವೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ 10 ಸದಸ್ಯರನ್ನು ಈ ಕಾರ್ಯಕ್ಕಾಗಿ ನಿಯೋಜಿಸಿದ್ದು, 5 ಪುರುಷರು ಮತ್ತು 5 ಮಹಿಳೆಯರು ಇರುತ್ತಾರೆ. ಪ್ರತಿ ತಿಂಗಳಿಗೆ ಒಂದು ಗ್ರಾಮದಲ್ಲಿ 4 ಬಾರಿ ಪರೀಕ್ಷೆ ನಡೆಸುವುದು ಕಡ್ಡಾಯ. ಗ್ರಾಮದ ಸರ್ಕಾರಿ ಶಾಲೆ, ಅಂಗನವಾಡಿ ಹಾಗು ಪಂಚಾಯಿತಿ ಮೂಲಕ ಮನೆ ಮನೆಗೆ ಪೂರೈಕೆಯಾಗುವ ನೀರನ್ನು ತಪಾಸಣೆಗೆ ಒಳಪಡಿಸುವುದು ಕಡ್ಡಾಯ. ಸರ್ಕಾರ ಕೊಡುವ ಪರೀಕ್ಷಾ ಕಿಟ್‌ನ ವರದಿ ಅಪೂರ್ಣ ಅಥವಾ ಸಂಶಯಕ್ಕೆ ಎಡೆಮಾಡಿ ಕೊಡುತ್ತಿದ್ದರೆ ಅದನ್ನು ಜಿಲ್ಲಾ ಪ್ರಯೋಗಾಲಯಕ್ಕೆ ಕಳುಹಿಸಿ ಕೊಡಲಾಗುತ್ತದೆ. ಅರಸೀಕೆರೆಯಲ್ಲಿ ಮತ್ತೊಂದು ಪ್ರಯೋಗಾಲಯವಿದ್ದು, ಅದರ ನೆರವನ್ನು ಅಧಿಕಾರಿಗಳು ಪಡೆಯುತ್ತಾರೆ.

> ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಪರೀಕ್ಷಾ ಗುರಿಯನ್ನು 22 ಸಾವಿರದಿಂದ 1.15 ಲಕ್ಷಕ್ಕೆ ಹೆಚ್ಚಿಸಲಾಗಿದೆ. ನಿಯೋಜಿತ ಸಿಬ್ಬಂದಿ ಹಾಗು ಗ್ರಾಮ ಪಂಚಾಯಿತಿ ಮಟ್ಟದ ಸದಸ್ಯರಿಗೆ ತರಬೇತಿ ನೀಡಲಾಗಿದೆ. ಜಿಲ್ಲೆಯ ಎರಡು ಗ್ರಾಮಗಳಲ್ಲಿ ನೀರು ಸೇವನೆಗೆ ಯೋಗ್ಯವಲ್ಲ ಎಂಬುದು ದೃಢಪಟ್ಟಿದೆ.
>
> -ಹೆಚ್.ಆರ್.ನವ್ಯಶ್ರೀ, ಕಾರ್ಯಪಾಲಕ ಇಂಜಿನೀಯರ್ ಗ್ರಾಮೀಣ ಕುಡಿಯುವ

ಪರೀಕ್ಷೆಯ ವರದಿಯನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಇಲಾಖಾ ವೆಬ್‌ಸೈಟ್‌ಗೆ ಅಪ್ಲೋಡ್ ಮಾಡಬೇಕು. ಅದರ ಮೇಲ್ವಿಚಾರಣೆಯನ್ನು ಜಿಲ್ಲಾ ಕೇಂದ್ರದ ಅಧಿಕಾರಿ ಮಾಡುತ್ತಾರೆ. ಸರ್ಕಾರದ ನಿರ್ದೇಶನದಂತೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ಅಶುದ್ಧ ನೀರು ಅನಾರೋಗ್ಯಕ್ಕೆ ಕಾರಣ**

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಇಷ್ಟೆಲ್ಲಾ ಪರೀಕ್ಷೆಗಳು ನಡೆಯುತ್ತಿದ್ದರೂ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಶುದ್ಧ ಕುಡಿಯುವ ನೀರಿನ ಬಗ್ಗೆ ಅರಿವು ಮೂಡಿಲ್ಲ. ದಶಕಗಳಿಂದ ಕೆರೆ ಅಥವಾ ಬೋರವೆಲ್ ನೀರನ್ನೇ ಸೇವಿಸುತ್ತಿದ್ದೇವೆ. ಯಾವ ಖಾಯಿಲೆಯೂ ಅಂಟಿಕೊಂಡಿಲ್ಲ. ಈ ಪರೀಕ್ಷೆಗಳೆಲ್ಲಾ ಏಕೆಂಬ ಪ್ರಶ್ನೆಗಳು ಅಧಿಕಾರಿಗಳಿಗೆ ಎದುರಾಗುತ್ತಿವೆ ಎನ್ನಲಾಗಿದೆ.

## ಮಂಜೇಶ್ ಹತ್ಯೆ: ವಿಚಾರಣೆಗೆ ಹಾಜರಾದ ಐವರು

• ಪ್ರಜೋದಯ ವರದಿ

**ಹಾಸನ:** ನಗರದ ಜಿಲ್ಲಾ ನ್ಯಾಯಾಲಯದ ಸಂಕೀರ್ಣ ಮುಂಭಾಗ ಭಾನುವಾರ ರಾತ್ರಿ ನಡೆದಿದ್ದ ರೌಡಿ ಶೀಟರ್ ಮಂಜೇಶ್ ಕೊಲೆ ಪ್ರಕರಣ ಸಂಬಂಧ ಬೆಂಗಳೂರಿನ ಐವರು ಬುಧವಾರ ಸ್ವಯಂ ಪ್ರೇರಿತವಾಗಿ ವಿಚಾರಣೆಗೆ ಹಾಜರಿದ್ದಾರೆ.

ನಗರದ ಎನ್.ಆರ್. ವೃತ್ತದಲ್ಲಿರುವ ಡಿವೈಎಸ್‌ಪಿ ಕಚೇರಿಗೆ ಬಂದಿರುವ ಬೆಂಗಳೂರಿನ ಪುನೀತ್, ಶಶಿ, ಲಿಂಗ, ಭರತ್ ಹಾಗು ಮತ್ತೊಬ್ಬ ಪೊಲೀಸರನ್ನು ಭೇಟಿಯಾಗಿದ್ದಾರೆಂದು ತಿಳಿದುಬಂದಿದೆ.

ಪೊಲೀಸ್ ಠಾಣೆಗೆ ಬರುವ ಮೊದಲು ವಿಡಿಯೋ ಹೇಳಿಕೆ ಬಿಡುಗಡೆ ಮಾಡಿರುವ ಯುವಕರು, ಮಂಜೇಶ್ ಕೊಲೆ ಪ್ರಕರಣದಲ್ಲಿ ನಮ್ಮ ಹೆಸರು ಕೇಳಿ ಬಂದಿದ್ದಕ್ಕೆ ಠಾಣೆಗೆ ಹೊರಟಿದ್ದೇವೆ. ಐದು ಜನರು ಸ್ನೇಹಿತರು ಪ್ರವಾಸಕ್ಕೆ ಬಂದಿದ್ದೆವು. ಪೊಲೀಸರು ನಮ್ಮನ್ನು ಹುಡುಕುತ್ತಿದ್ದಾರೆಂಬ ಮಾಹಿತಿ ಬಂದಿದ್ದಕ್ಕೆ ಠಾಣೆಗೆ



ಹೊರಟಿದ್ದೇವೆಂದು ಹೇಳಿದ್ದಾರೆ.

ನಾನು ಮೊದಲು ಜೆಪಿ ನಗರದಲ್ಲಿದ್ದೆ. ಮಂಜೇಶ್ ಸಹ ಅಲ್ಲೇ ಇದ್ದರಿಂದ ನಮ್ಮ ಮೇಲೆ ಪೊಲೀಸರಿಗೆ ಸಂಶಯ ಬಂದಿದೆ. ನಾವೆಲ್ಲರೂ ಫೇಸ್‌ಬುಕ್, ಇನ್‌ಸ್ಟಾಗ್ರಾಂನಲ್ಲಿ ಸ್ನೇಹಿತರಾಗಿದ್ದೇವೆ. ನಮಗೂ ಕೊಲೆಗೂ ಸಂಬಂಧವಿಲ್ಲ. ಈ ವಿಚಾರದಲ್ಲಿ ನಮಗೆ ಏನಾದರೂ ತೊಂದರೆಯಾದರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗು ಡಿವೈಎಸ್‌ಪಿ ಕಾರಣವೆಂದು ಪುನೀತ್ ಎಂಬಾತ ಆರೋಪಿಸಿದ್ದಾನೆ.

CMYK CMYK CMYK CMYK

# ಅಲ್ಲಿ ನೀರಲ್ಲಿ ಸಮರ, ಇಲ್ಲಿ ನೀರಿಗಾಗಿ ಸಮರ

> ನಾವು ಇದನ್ನೇ ಜಾಗತಿಕ ವಿದ್ಯಮಾನವೆಂಬಂತೆ ಪುಳಕಿತರಾಗುತ್ತಿದ್ದೇವೆ. ಕರ್ನಾಟಕದ ವಿಷಯಕ್ಕೆ ಬರುವುದಾದರೆ ಕಳೆದ ಒಂದು ದಶಕದಿಂದ ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಎದುರಾಗಿಲ್ಲ. ಆಗಾಗ ಕಾವೇರಿ ನೀರಿಗಾಗಿ ತಮಿಳುನಾಡು ತಕರಾರು ತೆಗೆದರೂ ಪ್ರಕೃತಿಯ ಕೃಪೆಯಿಂದ 10 ವರ್ಷಗಳಲ್ಲಿ ಎರಡೂ ರಾಜ್ಯಗಳಿಗೆ ನೀರಿನ ಕೊರತೆ ಆಗಿಲ್ಲ.




ಲೋಕಮತ

ಕಳೆದ ವರ್ಷ ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ಭರ್ಜರಿ ಎನ್ನುವಷ್ಟು ಮಳೆಯಾಗಿತ್ತು. ಆದರೆ ಈ ಬಾರಿ ಮಳೆರಾಯ ಆಗಾಗ ಬಂದು ಹೋಗುವ ಕೆಲಸ ಮಾಡುತ್ತಿದ್ದಾನೆ. ಕಳೆದ ವರ್ಷ ಮೇ ತಿಂಗಳಿನಲ್ಲಿಯೇ ಕಾಲಿಟ್ಟ ವರುಣ ಈ ಬಾರಿ ಈಗ ತಾನೇ ಹೊಸ್ತಿಲು ತುಳಿದಿದ್ದಾನೆ.

ಸಣ್ಣಪುಟ್ಟ ಮಳೆಗೂ ನಲುಗುವ ಬೆಂಗಳೂರಿನ ರಸ್ತೆಗಳು ಬಿಟ್ಟರೆ ಬೇರೆಲ್ಲೂ ಸರಿಯಾಗಿ ನೀರು ಹರಿದಿಲ್ಲ. ಕೃಷಿ ಚಟುವಟಿಕೆಗಳು ಇನ್ನಷ್ಟೇ ಆರಂಭವಾಗಬೇಕಿದೆ. ಈ ಮಧ್ಯೆ ಹವಾಮಾನ ತಜ್ಞರು ಈ ಬಾರಿ ಮುಂಗಾರು ವಾಡಿಕೆಗಿಂತ ಕಡಿಮೆಯಾಗಿರಲಿದೆ ಎಂದು ಎಚ್ಚರಿಸಿದ್ದಾರೆ.

ಮುಂದಿನ ದಿನಗಳಲ್ಲಿ ಎಲ್‌ನಿನೋ ಪ್ರಭಾವದ ಕಾರಣ ಜಾಗತಿಕ ತಾಪಮಾನ ಪ್ರಮಾಣ ಹೆಚ್ಚಾಗಲಿದೆ. ಭಾರತ ಸೇರಿದಂತೆ ಜಗತ್ತಿನ ಅನೇಕ ದೇಶಗಳಲ್ಲಿ ಮಳೆ ಪರಿಸ್ಥಿತಿ ಏರುಪೇರಾಗಬಹುದು ಎಂದು ವಿಶ್ವಸಂಸ್ಥೆ ಎಚ್ಚರಿಸಿದೆ. ಈ ನಡುವೆ ಜಲಸಂಪನ್ಮೂಲ ಖಾತೆ ಬೇಡ, ಪಡಿತರ ಖಾತೆ ಬೇಡ ಎಂದು ನಮ್ಮ ಮಂತ್ರಿ ಮಹನೀಯರು ಖಾತೆ ಕ್ಯಾತೆಯಲ್ಲಿ ಮುಳುಗಿದ್ದಾರೆ.

ನಾವು ಇದನ್ನೇ ಜಾಗತಿಕ ವಿದ್ಯಮಾನವೆಂಬಂತೆ ಪುಳಕಿತರಾಗುತ್ತಿದ್ದೇವೆ. ಕರ್ನಾಟಕದ ವಿಷಯಕ್ಕೆ ಬರುವುದಾದರೆ ಕಳೆದ ಒಂದು ದಶಕದಿಂದ ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಎದುರಾಗಿಲ್ಲ. ಆಗಾಗ ಕಾವೇರಿ ನೀರಿಗಾಗಿ ತಮಿಳುನಾಡು ತಕರಾರು ತೆಗೆದರೂ ಪ್ರಕೃತಿಯ ಕೃಪೆಯಿಂದ 10 ವರ್ಷಗಳಲ್ಲಿ ಎರಡೂ ರಾಜ್ಯಗಳಿಗೆ ನೀರಿನ ಕೊರತೆ ಆಗಿಲ್ಲ.

ತಮಿಳುನಾಡಿಗೆ ಸುಪ್ರೀಂ ಕೋರ್ಟ್ ನಿರ್ದೇಶನದ ಪ್ರಕಾರ ಬಿಡಬೇಕಿರುವ ವಾರ್ಷಿಕ 177.25 ಟಿಎಂಸಿ ನೀರಿಗಿಂತ ಹೆಚ್ಚು ಪ್ರಮಾಣದ ನೀರು ಹರಿದು ಹೋಗಿದೆ. ಆದರೆ ಈ ಬಾರಿ ಪರಿಸ್ಥಿತಿ ಭಿನ್ನವಾಗಿದೆ. ಕಳೆದ ವರ್ಷ ಇದೇ ಹೊತ್ತಿಗೆ ಕನ್ನಂಬಾಡಿ ಕಟ್ಟೆಯಲ್ಲಿ 100 ಅಡಿಗಿಂತ ಹೆಚ್ಚಿನ ನೀರು ಶೇಖರವಾಗಿತ್ತು. ಈ ಬಾರಿ ನೀರಿನ ಮಟ್ಟ 81 ಅಡಿಗಳಿಗೆ ಕುಸಿದಿದೆ.

ಸಕಾಲಕ್ಕೆ ಮಳೆ ಸುರಿದು ಕೆಆರ್‌ಎಸ್, ಕಬಿನಿ, ಹಾರಂಗಿ, ಹೇಮಾವತಿ ಜಲಾಶಯಗಳು ತುಂಬದಿದ್ದರೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಕುಡಿಯುವ ನೀರಿಗೂ ಹಾಹಾಕಾರ ಉಂಟಾಗುವ ಸಾಧ್ಯತೆ ಇದೆ. ತಜ್ಞರ ಎಚ್ಚರಿಕೆಯನ್ನು ಗಣನೆಗೆ ತೆಗೆದುಕೊಂಡರೆ ಕಾವೇರಿ ನೀರಿಗಾಗಿ ಎರಡೂ ರಾಜ್ಯಗಳ ನಡುವೆ ಮತ್ತೊಮ್ಮೆ ಕಲಹ ಭುಗಿಲೇಳುವ ಸಾಧ್ಯತೆ ಹೆಚ್ಚಿದೆ.

ಭಾರತೀಯ ಹವಾಮಾನ ಇಲಾಖೆ ಮತ್ತು ವಿಶ್ವ ಹವಾಮಾನ ಸಂಸ್ಥೆ ಬಿಡುಗಡೆ ಮಾಡಿರುವ ವರದಿಗಳು ದೇಶದ, ಅದರಲ್ಲೂ ಮುಖ್ಯವಾಗಿ ದಕ್ಷಿಣ ಭಾರತ ಮತ್ತು ಕರ್ನಾಟಕದ ಪಾಲಿಗೆ ಆತಂಕಕಾರಿಯಾಗಿವೆ. ಪೆಸಿಫಿಕ್ ಮಹಾಸಾಗರದಲ್ಲಿ ತಲ್ಲಣ ಮೂಡಿಸುತ್ತಿರುವ ಎಲ್ ನಿನೋ ವಿದ್ಯಮಾನವು ಈ ಬಾರಿ ಭಾರತದ ಮುಂಗಾರನ್ನು ನುಂಗಿ ಹಾಕುವ ಮುನ್ಸೂಚನೆ ನೀಡಿದೆ. ಈ ವರ್ಷ ರಾಷ್ಟ್ರೀಯ ಸರಾಸರಿ ಮಳೆಯು ದೀರ್ಘಾವಧಿಯ ಸರಾಸರಿಗಿಂತ ಶೇಕಡಾ 92ರಷ್ಟು ಮಾತ್ರ ಇರಲಿದ್ದು, ಇದು ಕಳೆದ ಹನ್ನೊಂದು ವರ್ಷಗಳಲ್ಲಿಯೇ ಅತ್ಯಂತ ದುರ್ಬಲ ಮುಂಗಾರು ಆಗುವ ಭೀತಿ ಮೂಡಿಸಿದೆ. ಜಾಗತಿಕ ತಾಪಮಾನ ಏರಿಕೆಯ ಈ ಕೆಟ್ಟ ಹೊಡೆತವು ಕೇವಲ ಕೃಷಿ ಕ್ಷೇತ್ರಕ್ಕೆ ಮಾತ್ರವಲ್ಲದೆ, ಕುಡಿಯುವ ನೀರು, ಅಂತರರಾಜ್ಯ ಸಂಬಂಧಗಳು ಮತ್ತು ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಮೇಲೂ ಗಂಭೀರ ಪ್ರಭಾವ ಬೀರಲಿದೆ.

## ಮುಂಗಾರಿನ ಮೇಲೆ ಮುಸುಕು

ಬದಲಾಗುತ್ತಿರುವ ಜಾಗತಿಕ ಹವಾಮಾನ ವೈಪರೀತ್ಯಕ್ಕೆ ಎಲ್ ನಿನೋ ಪ್ರಮುಖ ಕಾರಣ ಎಂದು ವಿಶ್ವಸಂಸ್ಥೆ ಕಳವಳ ವ್ಯಕ್ತಪಡಿಸಿದೆ. ಎಲ್ ನಿನೋ ಮಧ್ಯ ಮತ್ತು ಪೂರ್ವ ಪೆಸಿಫಿಕ್ ಮಹಾಸಾಗರದಲ್ಲಿ ಸಮುದ್ರದ ಮೇಲ್ಮೈ ತಾಪಮಾನವು ಸಹಜ ಸ್ಥಿತಿಗಿಂತ 0.5 ರಿಂದ 2 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗುವ ಒಂದು ನೈಸರ್ಗಿಕ ಹವಾಮಾನ ವಿದ್ಯಮಾನ. ಆದರೆ ಸಮುದ್ರದ ನೀರು ಹೀಗೆ ಅಸಹಜವಾಗಿ ಕಾಯುವುದರಿಂದ ವಾತಾವರಣಕ್ಕೆ ಅಗಾಧ ಪ್ರಮಾಣದ ಬೆಚ್ಚಗಿನ ಗಾಳಿ ಬಿಡುಗಡೆಯಾಗುತ್ತದೆ. ಇದು ಭಾರತದ ಕಡೆಗೆ ತೇವಾಂಶವನ್ನು ಹೊತ್ತು ತರುವ ಮಾನ್ಸೂನ್ ಮಾರುತಗಳನ್ನು ದುರ್ಬಲಗೊಳಿಸುತ್ತದೆ. ಸರಳವಾಗಿ ಹೇಳುವುದಾದರೆ, ಎಲ್ ನಿನೋ ದೇಶದ ಮುಂಗಾರು ಮಾರುತಗಳನ್ನು ದೂರ ಮಾಡುತ್ತದೆ.

ಸಾಮಾನ್ಯವಾಗಿ ಭಾರತದಲ್ಲಿ 96 ರಿಂದ 104 ಸೆಂ.ಮೀ. ಮಳೆಯ ಪ್ರಮಾಣವನ್ನು ಸಾಮಾನ್ಯ ಮಳೆ ಎಂದು ಪರಿಗಣಿಸಿದರೆ, ಅದು ಶೇಕಡಾ 90ಕ್ಕೆ ಕುಸಿದಾಗ ಅಧಿಕೃತ ಬರಗಾಲದ ಮುನ್ಸೂಚನೆ ಎನ್ನಲಾಗುತ್ತದೆ. ಈ ಬಾರಿ ಜೂನ್‌ನಿಂದ ಆಗಸ್ಟ್‌ವರೆಗಿನ ಅವಧಿಯಲ್ಲಿ ಎಲ್ ನಿನೋ ಪ್ರಭಾವ ಶೇಕಡಾ 80ರಷ್ಟು ತೀವ್ರವಾಗಿರಲಿದ್ದು, ಹಗಲು ಮತ್ತು ರಾತ್ರಿ ತಾಪಮಾನವು ಸಾಮಾನ್ಯಕ್ಕಿಂತ ಹೆಚ್ಚಾಗಿರಲಿದೆ.

ಪರಿಣಾಮವಾಗಿ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ತೀವ್ರ ಬರ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ಅಂದಾಜಿಸಲಾಗಿದೆ. ದೇಶಕ್ಕೆಲ್ಲ ಅನ್ನ ನೀಡುವ ದಕ್ಷಿಣ ಭಾರತದ ಕೃಷಿ ಭೂಮಿ ಈ ಬಾರಿ ಒಣಗುವ ಲಕ್ಷಣಗಳು ಕಾಣಿಸುತ್ತಿವೆ.

## ಕೃಷಿ ಬಿಕ್ಕಟ್ಟು ದೇಶಕ್ಕೆ ಇಕ್ಕಟ್ಟು

ಭಾರತದ ಒಟ್ಟು ಜಿಡಿಪಿಯಲ್ಲಿ ಕೃಷಿ ರಂಗದ ಪಾಲು ಇಂದಿಗೂ ಶೇ.15 ರಷ್ಟಿದೆ. ಇಂತಹ ಪರಿಸ್ಥಿತಿಯಲ್ಲಿ ಮುಂಗಾರು ಕೈಕೊಟ್ಟರೆ ಅದರ ನೇರ ಏಟು ಗ್ರಾಮೀಣ ಆರ್ಥಿಕತೆಗೆ ಬೀಳುತ್ತದೆ. ಪ್ರಸ್ತುತ ಜಾಗತಿಕ ರಾಜಕೀಯ ವಿದ್ಯಮಾನಗಳೂ ಭಾರತದ ಆರ್ಥಿಕತೆಗೆ ಪೂರಕವಾಗಿಲ್ಲ. ಕೊಲ್ಲಿ ಯುದ್ಧದ ಪರಿಣಾಮ ಕಚ್ಚಾತೈಲ, ರಸಗೊಬ್ಬರ ಮತ್ತು ಇತರ ಪೆಟ್ರೋಲಿಯಂ ಉಪ ಉತ್ಪನ್ನಗಳ ಬೆಲೆ ಗಗನಕ್ಕೇರಿದೆ. ದೇಶದ ಜನಸಾಮಾನ್ಯರು ಹಣದುಬ್ಬರ ಮತ್ತು ವಿಪರೀತ ಬೆಲೆ ಏರಿಕೆಯಿಂದ ತತ್ತರಿಸುತ್ತಿದ್ದಾರೆ. ಅಗತ್ಯ ವಸ್ತುಗಳ ಬೆಲೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಇದರ ಜೊತೆಗೆ ಈಗ ಮುಂಗಾರು ಕೊರತೆಯೂ ಸೇರಿದರೆ, ಕೃಷಿ ಉತ್ಪಾದನೆ ಕುಂಠಿತಗೊಂಡು ಆಹಾರ ಧಾನ್ಯಗಳು ಸೇರಿದಂತೆ ಜೀವನಾವಶ್ಯಕ ಪದಾರ್ಥಗಳ ಬೆಲೆ ಇನ್ನಷ್ಟು ದುಬಾರಿಯಾಗಲಿದೆ.

ಕೃಷಿ ವಲಯ ಬಿಕ್ಕಟ್ಟಿನ ಸುಳಿಗೆ ಸಿಲುಕಿದರೆ ದೇಶದ ಒಟ್ಟಾರೆ ಆರ್ಥಿಕತೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗುವುದು ಖಚಿತ. ಪ್ರಸ್ತುತ ರಾಜ್ಯದಲ್ಲಿ ಹೊಸ ಸರಕಾರ ಅಸ್ತಿತ್ವಕ್ಕೆ ಬಂದಿದೆ. ಸಚಿವ ಸಂಪುಟ ರಚನೆಯ ಸಂದರ್ಭದಲ್ಲಿ ಸಂಪದ್ಭರಿತ ಹಾಗೂ ಪ್ರಭಾವಿ ಖಾತೆಗಳಿಗಾಗಿ ಭಾರೀ ಪೈಪೋಟಿ ನಡೆದಿದೆಯೇ ವಿನಾ, ರೈತರ ಬದುಕು ಬವಣೆಗಳಿಗೆ ಸಂಬಂಧಿಸಿದ ಕೃಷಿ ಸಚಿವ ಖಾತೆಗಾಗಿ ಯಾವ ಮಂತ್ರಿಯಿಂದಲೂ ಬೇಡಿಕೆ ಬಂದಿಲ್ಲ.

ರಾಜ್ಯದಲ್ಲಿ ಈ ಬಾರಿ ಮುಂಗಾರು ಪೂರ್ವ ಮಳೆ ಕೆಲವು ಭಾಗಗಳಲ್ಲಿ ಚೆನ್ನಾಗಿ ಆಗಿರುವುದರಿಂದ ರೈತರು ಭೂಮಿ ಹಸನುಗೊಳಿಸಿ ಬಿತ್ತನೆಗೆ ಸಜ್ಜಾಗಿದ್ದಾರೆ. ಎಡೆ ಬಿತ್ತನೆ ಬೀಜಗಳಿಗೆ ಭಾರೀ ಬೇಡಿಕೆ ಕೇಳಿ ಬರುತ್ತಿದೆ. ದುರದೃಷ್ಟವಶಾತ್, ಈ ಬೇಡಿಕೆಯನ್ನು ಸಕಾಲದಲ್ಲಿ ಪೂರೈಸಲು ನಮ್ಮ ಕೃಷಿ ಇಲಾಖೆ ಯಾವುದೇ ಪೂರ್ವ ಸಿದ್ಧತೆ ಮಾಡಿಕೊಂಡಿಲ್ಲ. ಇದು ಹೊಸದೇನಲ್ಲ; ಕಳೆದ ಐದಾರು ವರ್ಷಗಳಿಂದ ಹಾವೇರಿ ಸೇರಿದಂತೆ ರಾಜ್ಯದ ವಿವಿಧೆಡೆ ಬಿತ್ತನೆ ಬೀಜ ಮತ್ತು ರಸಗೊಬ್ಬರ ಪೂರೈಕೆಯಲ್ಲಿ ತೀವ್ರ ವ್ಯತ್ಯಯ ಉಂಟಾಗುತ್ತಿರುವ ಬಗ್ಗೆ ರೈತರಿಂದ ದೂರುಗಳು ಬರುತ್ತಿದ್ದರೂ ಅದು ಅರಣ್ಯ ರೋದನವಾಗಿದೆ.



## ಅನಗತ್ಯ ಜಲ ಪೋಲು

ನಮ್ಮ ಇಂದಿನ ಜಲ ಬಿಕ್ಕಟ್ಟಿಗೆ ಕೇವಲ ಪ್ರಕೃತಿಯನ್ನು ದೂಷಿಸಿದರೆ ಸಾಲದು, ನಮ್ಮ ತಪ್ಪುಗಳೂ ಅಷ್ಟೇ ದೊಡ್ಡದಾಗಿವೆ. ಮೇಲ್ಮೈ ಜಲಮೂಲಗಳಾದ ನದಿ ಮತ್ತು ಕೆರೆಗಳು ಒಣಗುತ್ತಿದ್ದಂತೆ ನಾವು ಭೂಮಿಯ ಆಳಕ್ಕೆ ಕೈಹಾಕುತ್ತಿದ್ದೇವೆ. ಆದರೆ, ಹಳ್ಳಿಗಳಲ್ಲೂ, ನಗರಗಳಲ್ಲೂ ಮಳೆ ನೀರು ಒಂದಿಷ್ಟೂ ನೆಲದ ಒಡಲು ಸೇರದ ಕಾರಣ ಅಂತರ್ಜಲ ಮಟ್ಟವು ದಿನದಿಂದ ದಿನಕ್ಕೆ ಗಣನೀಯವಾಗಿ ಕುಸಿಯುತ್ತಿದೆ. ಬೋರ್‌ವೆಲ್‌ಗಳು ಒಣಗುತ್ತಿವೆ. ಕುಡಿಯುವ ನೀರಿಗಾಗಿ ಹಾಹಾಕಾರ ಸೃಷ್ಟಿಯಾಗುತ್ತಿದೆ. ಒಂದು ಕಡೆ ಅಂತರ್ಜಲವನ್ನು ಅತಿಯಾಗಿ ಲೂಟಿ ಮಾಡಲಾಗುತ್ತಿದೆ. ಮತ್ತೊಂದು ಕಡೆ ಅದನ್ನು ಮರುಪೂರಣ ಮಾಡುವ ಅಥವಾ ನೀರಿಂಗಿಸುವ ಯಾವುದೇ ಪ್ರಾಮಾಣಿಕ ಪ್ರಯತ್ನಗಳು ಸಾರ್ವಜನಿಕ ಮತ್ತು ಆಡಳಿತಾತ್ಮಕ ಮಟ್ಟದಲ್ಲಿ ನಡೆಯುತ್ತಿಲ್ಲ.

ವರ್ಷದಿಂದ ವರ್ಷಕ್ಕೆ ಹೆಚ್ಚುವರಿ ಟಿಎಂಸಿ ನೀರು ಬೇಡುವ ಬಂಗಳೂರಿನಂತಹ ಪ್ರಮುಖ ನಗರಗಳು ಇಂದು ಕಾಂಕ್ರೀಟ್ ಕಾಡುಗಳಾಗಿ ಮಾರ್ಪಟ್ಟಿವೆ. ಸಣ್ಣಪುಟ್ಟ ಮಳೆಯಲ್ಲೂ ಬೆಂಗಳೂರಿನ ರಸ್ತೆಗಳು ಮುಳುಗುತ್ತಿವೆ ಹೊರತು ಹನಿ ನೀರು ಕೂಡ ನೆಲದಾಳವನ್ನು ಸೇರುತ್ತಿಲ್ಲ. ಮಲೆನಾಡು ಹಾಸನ ಜಿಲ್ಲೆಯಲ್ಲಿ ಬೀಳುವಷ್ಟೇ ಪ್ರಮಾಣದ ಮಳೆ ಬೆಂಗಳೂರಿನಲ್ಲಿ ಬೀಳುತ್ತದೆ. ಆದರೆ ನಗರದ ಇಂಚಿಂಚು ಭೂಮಿಯನ್ನೂ ಕಾಂಕ್ರೀಟ್‌ನಿಂದ ಮುಚ್ಚಿರುವುದರಿಂದ ಮಳೆ ನೀರು ನೆಲದ ಒಡಲು ಸೇರಲು ದಾರಿಯೇ ಇಲ್ಲದಂತಾಗಿದೆ. ನಗರ ಪ್ರದೇಶಗಳಲ್ಲಿ ಬೀಳುವ ಪ್ರತಿಯೊಂದು ಹನಿಯೂ ಚರಂಡಿಗಳಲ್ಲಿ ಹರಿದು ಪೋಲಾಗುತ್ತಿದೆ. ಮಳೆ ನೀರನ್ನು ಭೂಮಿಯೊಳಗೆ ಇಂಗಿಸದೆ ಚರಂಡಿಗಳಲ್ಲಿ ಹರಿ ಬಿಡುವ ನಾವು ಮತ್ತದೇ ಮಳೆಗಾಗಿ ಕಾತರಿಸುತ್ತೇವೆ. ಪ್ರಾರ್ಥಿಸುತ್ತೇವೆ.

## ಇಸ್ರೇಲ್ ಜಲ ನಿರ್ವಹಣೆ ಮಾದರಿ

ಅರಬ್ ಜಗತ್ತಿನ 60ಕ್ಕೂ ಹೆಚ್ಚು ಶತ್ರು ದೇಶಗಳನ್ನು ಎದುರಿಸಿ ನಿಂತ ಇಸ್ರೇಲ್ ಭಾರತದಲ್ಲಿ ಹಲವರಿಗೆ ಪ್ರಿಯ ದೇಶ. ಆದರೆ ನಿಜವಾಗಿಯೂ ನೀರಿನ ಸದ್ಬಳಕೆ ಮತ್ತು ಕಟ್ಟುನಿಟ್ಟಾದ ಜಲ ನಿರ್ವಹಣೆಯ ವಿಷಯದಲ್ಲಿ ನಾವು ಇಸ್ರೇಲ್‌ನಂತಹ ದೇಶವನ್ನು ಅನುಸರಿಸಬೇಕಾಗಿದೆ.

ತೀರಾ ಕಡಿಮೆ ಮಳೆಯಾಗುವ ಮರಳುಗಾಡಿನ ಪರಿಸರದಲ್ಲೂ ಇಸ್ರೇಲ್ ಅತ್ಯಾಧುನಿಕ ತಂತ್ರಜ್ಞಾನ, ನೀರಿನ ಮರುಬಳಕೆ ಮತ್ತು ಹನಿ ನೀರಾವರಿ ಪದ್ಧತಿಯ ಮೂಲಕ ನೀರಿನ ಸ್ವಾವಲಂಬನೆ ಸಾಧಿಸಿದೆ. ನಮಗೆ ವಾರ್ಷಿಕ ನೂರಾರು ಟಿಎಂಸಿ ನೀರು ಸಿಕ್ಕರೂ ಅದನ್ನು ನಿರ್ವಹಿಸಲಾಗದೆ ಪೋಲು ಮಾಡುತ್ತಿದ್ದೇವೆ. ಇಸ್ರೇಲ್‌ನ ಜಲ ಶಿಸ್ತನ್ನು ನಾವು ಅಳವಡಿಸಿಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಭೀಕರವಾಗಲಿದೆ.

ನೀರು ಕೇವಲ ಒಂದು ಸಂಪನ್ಮೂಲವಲ್ಲ, ಅದು ಮಾನವನ ಅಸ್ತಿತ್ವದ ಮೂಲಾಧಾರ. ಪ್ರಕೃತಿಯು ನಮಗೆ ಎಲ್ ನಿನೋ ಮತ್ತು ಮುಂಗಾರು ಕೊರತೆಯ ರೂಪದಲ್ಲಿ ಒಂದು ಸ್ಪಷ್ಟ ಎಚ್ಚರಿಕೆಯನ್ನು ನೀಡಿದೆ. ಈ ಸವಾಲನ್ನು ನಾವು ನಿರ್ಲಕ್ಷಿಸಿದರೆ, ಅದರ ಬೆಲೆಯನ್ನು ನಮ್ಮ ಇಡೀ ದೇಶ ಮತ್ತು ರೈತಾಪಿ ವರ್ಗ ತೆರಬೇಕಾಗುತ್ತದೆ. ಸರಕಾರಗಳು ಉಪದೇಶಗಳನ್ನು ಬದಿಗಿಟ್ಟು, ಮಣ್ಣಿನ ಮಕ್ಕಳ ಮತ್ತು ನಾಗರಿಕರ ಜಲ ಭದ್ರತೆಗೆ ತಕ್ಷಣದ ಕಾರ್ಯ ಯೋಜನೆಗಳನ್ನು ರೂಪಿಸಬೇಕಾಗಿದೆ.

ನಾಗರಿಕರೂ ಸಹ ಹನಿ ಹನಿ ನೀರನ್ನೂ ಮಿತವ್ಯಯದಿಂದ ಬಳಸಿ, ಮಳೆ ನೀರನ್ನು ಮಣ್ಣಿನ ಒಡಲಿಗೆ ಇಂಗಿಸುವ ಸಂಕಲ್ಪ ಮಾಡಬೇಕಿದೆ. ಪ್ರಕೃತಿಯ ಮುನಿಸನ್ನು ಪ್ರಕೃತಿ ಮೇಲಿನ ಒಲವಿನಿಂದಲಷ್ಟೇ ಎದುರಿಸಲು ಸಾಧ್ಯ.

– **ಲೋಕೇಶ್** ಕಾಯರ್ಗ




# ಹಣಕಾಸು ಯೋಜನೆ ಕೇವಲ ಶ್ರೀಮಂತರಿಗೇನಾ?

ನನ್ನ ಆದಾಯ ಇನ್ನೂ ಕಡಿಮೆ ಇದೆ, ನಂತರ ಹಣಕಾಸು ಯೋಜನೆ ಆರಂಭಿಸುತ್ತೇನೆ.

ಮೊದಲು ಮನೆ ಖರೀದಿಸಿ, ನಂತರ ಹೂಡಿಕೆ ಮಾಡುತ್ತೇನೆ.

ಈಗ ಕುಟುಂಬದ ಜವಾಬ್ದಾರಿಗಳು ಹೆಚ್ಚು, ಉಳಿತಾಯಕ್ಕೆ ಸಮಯವಿಲ್ಲ.

ಇಂತಹ ಮಾತುಗಳನ್ನು ನಾವು ಆಗಾಗ ಕೇಳುತ್ತೇವೆ. ವಾಸ್ತವವಾಗಿ ಹಣಕಾಸು ಯೋಜನೆ ಹೆಚ್ಚು ಹಣ ಇರುವವರಿಗೆ ಅಗತ್ಯವಿಲ್ಲ; ಬದಲಿಗೆ ಸೀಮಿತ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಬೇಕಾದವರಿಗೆ ಅದು ಇನ್ನಷ್ಟು ಅಗತ್ಯ.

ಒಬ್ಬ ವ್ಯಕ್ತಿ ತಿಂಗಳಿಗೆ ₹30,000 ಗಳಿಸುತ್ತಿರಲಿ ಅಥವಾ ₹3,00,000 ಗಳಿಸುತ್ತಿರಲಿ, ಹಣಕಾಸಿನ ಯೋಜನೆಯ ಮೂಲ ತತ್ವಗಳು ಒಂದೇ ಆಗಿರುತ್ತವೆ:

★ ಆದಾಯಕ್ಕಿಂತ ಕಡಿಮೆ ಖರ್ಚು ಮಾಡುವುದು

★ ನಿಯಮಿತ ಉಳಿತಾಯ ಮಾಡುವುದು

★ ಭವಿಷ್ಯದ ಗುರಿಗಳಿಗೆ ಹೂಡಿಕೆ ಮಾಡುವುದು

★ ಅಪಾಯಗಳಿಂದ ಕುಟುಂಬವನ್ನು ರಕ್ಷಿಸುವುದು

ಹಣಕಾಸು ಯೋಜನೆ ಎಂಬುದು ಆದಾಯದ ಗಾತ್ರವನ್ನು ಅವಲಂಬಿಸಿಲ್ಲ; ಅದು ಹಣದ ಬಗ್ಗೆ ಇರುವ ಶಿಸ್ತನ್ನು ಅವಲಂಬಿಸಿದೆ.

## ಹಣದ ಬಗ್ಗೆ ನಮ್ಮ ಸಾಮಾನ್ಯ ತಪ್ಪು ಕಲ್ಪನೆಗಳು

ನಮ್ಮ ಸಮಾಜದಲ್ಲಿ ಹಣದ ಬಗ್ಗೆ ಕೆಲವು ತಪ್ಪು ನಂಬಿಕೆಗಳು ಇವೆ.

## ಬ್ಯಾಂಕ್‌ನಲ್ಲಿ ಹಣ ಇಟ್ಟರೆ ಸಾಕು

ಹಿಂದೆ ಬ್ಯಾಂಕ್ ಠೇವಣಿಗಳು ಉತ್ತಮ ಬಡ್ಡಿ ನೀಡುತ್ತಿದ್ದವು. ಆದರೆ ಇಂದಿನ ಹಣದುಬ್ಬರದ ಪರಿಸ್ಥಿತಿಯಲ್ಲಿ ಕೇವಲ ಉಳಿತಾಯ ಖಾತೆಯಲ್ಲಿ ಹಣ ಇಡುವುದರಿಂದ ಸಂಪತ್ತು ನಿರ್ಮಾಣ ಸಾಧ್ಯವಿಲ್ಲ.

## ಷೇರು ಮಾರುಕಟ್ಟೆ ಜೂಜಾಟ

ಷೇರು ಮಾರುಕಟ್ಟೆಯಲ್ಲಿ ಅಲ್ಪಾವಧಿಯಲ್ಲಿ ಏರಿಳಿತಗಳಿದ್ದರೂ, ದೀರ್ಘಾವಧಿಯಲ್ಲಿ ಉತ್ತಮ ಕಂಪನಿಗಳ ಬೆಳವಣಿಗೆಯಲ್ಲಿ ಪಾಲುದಾರರಾಗುವ ಅವಕಾಶವನ್ನು ಅದು ನೀಡುತ್ತದೆ.

## ನಾನು ನಂತರ ಆರಂಭಿಸುತ್ತೇನೆ

ಹೂಡಿಕೆಯಲ್ಲಿ ದೊಡ್ಡ ಶತ್ರು ಮಾರುಕಟ್ಟೆಯ ಕುಸಿತವಲ್ಲ; ವಿಳಂಬ.

ಪ್ರತಿ ವರ್ಷ ತಡವಾಗಿ ಆರಂಭಿಸುವುದರಿಂದ ಸಂಯೋಜಿತ ಬಡ್ಡಿಯ ಶಕ್ತಿಯನ್ನು ಕಳೆದುಕೊಳ್ಳುತ್ತೇವೆ.

## ಹೆಚ್ಚು ಆದಾಯ ಬಂದಾಗ ಉಳಿತಾಯ ಮಾಡುತ್ತೇನೆ

ಹೆಚ್ಚಿನ ಆದಾಯ ಬಂದಾಗ ಖರ್ಚುಗಳೂ ಹೆಚ್ಚಾಗುತ್ತವೆ. ಆದ್ದರಿಂದ ಉಳಿತಾಯದ ಅಭ್ಯಾಸವನ್ನು ಈಗಲೇ ಬೆಳೆಸಬೇಕು.

## ಹಣದುಬ್ಬರ : ಮೌನವಾಗಿ ಸಂಪತ್ತನ್ನು ಕುಗ್ಗಿಸುವ ಶಕ್ತಿ

ಒಂದು ಉದಾಹರಣೆ ನೋಡೋಣ.

ಇಂದು ಒಂದು ಕುಟುಂಬದ ಮಾಸಿಕ ವೆಚ್ಚ ₹50,000 ಇದ್ದರೆ, ವರ್ಷಕ್ಕೆ 6% ಹಣದುಬ್ಬರದ ದರದಲ್ಲಿ 12 ವರ್ಷಗಳ ನಂತರ ಅದೇ ಜೀವನಶೈಲಿಯನ್ನು ಕಾಪಾಡಿಕೊಳ್ಳಲು ಸುಮಾರು ₹1 ಲಕ್ಷ ಅಗತ್ಯವಾಗಬಹುದು.

ಅಂದರೆ:

★ ವಸ್ತುಗಳ ಬೆಲೆ ಏರುತ್ತದೆ

★ ಶಿಕ್ಷಣ ವೆಚ್ಚ ಹೆಚ್ಚುತ್ತದೆ

★ ವೈದ್ಯಕೀಯ ವೆಚ್ಚ ಹೆಚ್ಚುತ್ತದೆ

★ ಜೀವನಶೈಲಿ ವೆಚ್ಚ ಹೆಚ್ಚುತ್ತದೆ

ಹಣದುಬ್ಬರವನ್ನು ಸೋಲಿಸುವ ಏಕೈಕ ಮಾರ್ಗ ಎಂದರೆ ದೀರ್ಘಾವಧಿಯಲ್ಲಿ ಹಣದುಬ್ಬರಕ್ಕಿಂತ ಹೆಚ್ಚಿನ ಬೆಳವಣಿಗೆಯನ್ನು ನೀಡುವ ಆಸ್ತಿಗಳಲ್ಲಿ ಹೂಡಿಕೆ ಮಾಡುವುದು.

## ಹಣಕಾಸು ಯೋಜನೆಯಲ್ಲಿ ಕುಟುಂಬದ ಪಾತ್ರ

ಹಣಕಾಸು ಯೋಜನೆ ಕೇವಲ ಒಬ್ಬ ವ್ಯಕ್ತಿಯ ವಿಷಯವಲ್ಲ; ಅದು ಕುಟುಂಬದ ವಿಷಯ.

ಕುಟುಂಬದ ಸದಸ್ಯರಿಗೆ ಈ ವಿಷಯಗಳ ಬಗ್ಗೆ ಮಾಹಿತಿ ಇರಬೇಕು:

ಬ್ಯಾಂಕ್ ಖಾತೆಗಳು

ವಿಮಾ ಪಾಲಿಸಿಗಳು

ಹೂಡಿಕೆ ವಿವರಗಳು

ಸಾಲಗಳು

ನಾಮಿನಿ ಮಾಹಿತಿ

ಅನೇಕ ಕುಟುಂಬಗಳು ಆರ್ಥಿಕ ಸಂಕಷ್ಟವನ್ನು ಎದುರಿಸುವ ಪ್ರಮುಖ ಕಾರಣವೆಂದರೆ ಹಣಕಾಸಿನ ಮಾಹಿತಿಯನ್ನು ಒಬ್ಬ ವ್ಯಕ್ತಿ ಮಾತ್ರ ತಿಳಿದುಕೊಂಡಿರುವುದು.

## ನಿವೃತ್ತಿ ಯೋಜನೆ: ನಾವು ಹೆಚ್ಚು ನಿರ್ಲಕ್ಷಿಸುವ ಗುರಿ

ಹೆಚ್ಚಿನ ಜನರು ಮನೆ ಖರೀದಿ ಅಥವಾ ಮಕ್ಕಳ ಶಿಕ್ಷಣಕ್ಕಾಗಿ ಯೋಜಿಸುತ್ತಾರೆ. ಆದರೆ ನಿವೃತ್ತಿ ಜೀವನಕ್ಕಾಗಿ ಯೋಜಿಸುವುದು ಬಹಳಷ್ಟು ಜನರಿಂದ ಕಡೆಗಣಿಸಲ್ಪಡುತ್ತದೆ.

ಒಂದು ಸಮಯದಲ್ಲಿ:

★ ನಿಯಮಿತ ಸಂಬಳ ಇರುವುದಿಲ್ಲ

★ ವೈದ್ಯಕೀಯ ವೆಚ್ಚಗಳು ಹೆಚ್ಚಾಗುತ್ತವೆ

★ ಕುಟುಂಬದ ಜವಾಬ್ದಾರಿಗಳು ಮುಂದುವರಿಯಬಹುದು

ಆದ್ದರಿಂದ ನಿವೃತ್ತಿ ಯೋಜನೆಯನ್ನು ಸಾಧ್ಯವಾದಷ್ಟು ಬೇಗ ಆರಂಭಿಸಬೇಕು.

30 ವರ್ಷ ವಯಸ್ಸಿನಲ್ಲಿ ಆರಂಭಿಸಿದ ವ್ಯಕ್ತಿಗೆ ಮತ್ತು 45 ವರ್ಷ ವಯಸ್ಸಿನಲ್ಲಿ ಆರಂಭಿಸಿದ ವ್ಯಕ್ತಿಗೆ ಬೇಕಾಗುವ ಮಾಸಿಕ ಹೂಡಿಕೆಯಲ್ಲಿ ದೊಡ್ಡ ವ್ಯತ್ಯಾಸವಿರುತ್ತದೆ.

ಸಮಯವೇ ನಿವೃತ್ತಿ ಯೋಜನೆಯ ದೊಡ್ಡ ಮಿತ್ರ!!

## ಮಕ್ಕಳಿಗೆ ಹಣಕಾಸಿನ ಶಿಕ್ಷಣ ನೀಡೋಣ

ನಾವು ಮಕ್ಕಳಿಗೆ ಗಣಿತ, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಕಲಿಸುತ್ತೇವೆ.

ಆದರೆ ಈ ವಿಷಯಗಳನ್ನು ಕಲಿಸಲು ಮರೆಯುತ್ತೇವೆ:

★ ಹಣವನ್ನು ಹೇಗೆ ಉಳಿಸಬೇಕು?

★ ಬಜೆಟ್ ಎಂದರೇನು?

★ ಹೂಡಿಕೆ ಎಂದರೇನು?

★ ಸಾಲದ ಅಪಾಯಗಳು ಯಾವುವು?

ಚಿಕ್ಕ ವಯಸ್ಸಿನಲ್ಲಿಯೇ ಹಣದ ಮೌಲ್ಯವನ್ನು ಅರ್ಥಮಾಡಿಕೊಳ್ಳುವ ಮಕ್ಕಳು ಮುಂದಿನ ದಿನಗಳಲ್ಲಿ ಉತ್ತಮ ಹಣಕಾಸು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ.

## ಆರ್ಥಿಕ ಸ್ವಾತಂತ್ರ್ಯ: ಅಂತಿಮ ಗುರಿ

ಆರ್ಥಿಕ ಸ್ವಾತಂತ್ರ್ಯ ಎಂದರೆ ಕೋಟ್ಯಾಧಿಪತಿಯಾಗುವುದು ಅಲ್ಲ.

ನಿಮ್ಮ ಜೀವನಶೈಲಿಯನ್ನು ನಿರ್ವಹಿಸಲು ಬೇಕಾದಷ್ಟು ಆದಾಯವನ್ನು ನಿಮ್ಮ ಹೂಡಿಕೆಗಳು ಉತ್ಪಾದಿಸುವ ಹಂತವೇ ಆರ್ಥಿಕ ಸ್ವಾತಂತ್ರ್ಯ.

ಆಗ ನೀವು:

★ ಉದ್ಯೋಗದ ಬಗ್ಗೆ ಕಡಿಮೆ ಆತಂಕ ಪಡುತ್ತೀರಿ

★ ನಿಮ್ಮ ಆಸಕ್ತಿಯ ಕೆಲಸವನ್ನು ಆಯ್ಕೆ ಮಾಡಬಹುದು

★ ಕುಟುಂಬದೊಂದಿಗೆ ಹೆಚ್ಚು ಸಮಯ ಕಳೆಯಬಹುದು

★ ಹಣದ ಒತ್ತಡವಿಲ್ಲದೆ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು

ಇದು ಕೇವಲ ಹಣದ ಗುರಿಯಲ್ಲ; ಜೀವನದ ಗುಣಮಟ್ಟದ ಗುರಿಯಾಗಿದೆ.

## ಇಂದೇ ಆರಂಭಿಸಿ

ಹಣಕಾಸಿನ ಯಶಸ್ಸಿಗೆ ದೊಡ್ಡ ರಹಸ್ಯಗಳಿಲ್ಲ. ಸರಳವಾದ ಕೆಲವು ಅಭ್ಯಾಸಗಳು ಸಾಕು:

ನಿಮ್ಮ ಆದಾಯ ಮತ್ತು ಖರ್ಚುಗಳನ್ನು ದಾಖಲಿಸಿ

ಕನಿಷ್ಠ 6 ತಿಂಗಳ ತುರ್ತು ನಿಧಿ ನಿರ್ಮಿಸಿ

ಸಮರ್ಪಕ ಆರೋಗ್ಯ ಮತ್ತು ಜೀವ ವಿಮೆ ಪಡೆಯಿರಿ

ನಿಯಮಿತ ಅಥವಾ ಹೂಡಿಕೆ ಆರಂಭಿಸಿ

ವರ್ಷಕ್ಕೊಮ್ಮೆ ನಿಮ್ಮ ಯೋಜನೆಯನ್ನು ಪರಿಶೀಲಿಸಿ


ಮಾರುಕಟ್ಟೆಯ ಸುದ್ದಿಗಳಿಗಿಂತ ನಿಮ್ಮ ಗುರಿಗಳ ಮೇಲೆ ಗಮನ ಕೊಡಿ

ಇಂದು ನೀವು ತೆಗೆದುಕೊಳ್ಳುವ ಸಣ್ಣ ಹಣಕಾಸಿನ ನಿರ್ಧಾರಗಳು, ಮುಂದಿನ 10, 20 ಅಥವಾ 30 ವರ್ಷಗಳಲ್ಲಿ ನಿಮ್ಮ ಜೀವನದ ಗುಣಮಟ್ಟವನ್ನು ನಿರ್ಧರಿಸುತ್ತವೆ.

ಹಣ ಸಂಪಾದಿಸುವುದು ಒಂದು ಕೌಶಲ್ಯ. ಹಣವನ್ನು ಉಳಿಸುವುದು ಒಂದು ಅಭ್ಯಾಸ. ಆದರೆ ಹಣವನ್ನು ಸಂಪತ್ತಾಗಿ ಪರಿವರ್ತಿಸುವುದು ಒಂದು ಕಲೆ.

ಆ ಕಲೆಯನ್ನು ಕಲಿಯಲು ಇಂದು ಆರಂಭಿಸಿ.

– **ಯಶೋದನಂದನ**



# ಅಧಿಕ ನೀರು ಮತ್ತು ಸಸ್ಯಗಳ ಬೆಳವಣಿಗೆ

ಬಹಳಷ್ಟು ರೈತರು ತಾವು ಬೆಳೆದ ಬೆಳೆಗೆ ಎಷ್ಟೇ ಆರೈಕೆ ಮಾಡಿದರೂ ಫಸಲು ಇಲ್ಲ ಎನ್ನುತ್ತಾರೆ. ಇದಕ್ಕೆ ಒಂದು ಕಾರಣ ಸಸ್ಯದಲ್ಲಿ ಆಹಾರ ಸಂಗ್ರಹಿಸುವ ಬೇರುಗಳ ಕೊರತೆ. ಬೇರುಗಳು ಹುಟ್ಟಿದಷ್ಟೂ ನೀರು ಹೆಚ್ಚಾಗಿ ಅದು ಕೊಳೆತು ಹೋಗಿ ನಷ್ಟವಾಗುತ್ತವೆ. ಹೊಸ ಬೇರುಗಳು ಹುಟ್ಟಿ ಚಟುವಟಿಕೆ ಪ್ರಾರಂಭಿಸುವ ಸಮಯಕ್ಕೆ ಮತ್ತೆ ಅದೂ ಕೊಳೆಯುವುದಕ್ಕೆ ಪ್ರಾರಂಭವಾಗುತ್ತದೆ. ಬೇರುಗಳ ರಕ್ಷಣೆಗೆ ಸೂಕ್ತ ಬಸಿ ವ್ಯವಸ್ಥೆ ಮಾಡಿಕೊಂಡರೆ ಸಸ್ಯ ಆರೋಗ್ಯ ಸುಧಾರಿಸಿ ಇಳುವರಿ ಬರುತ್ತದೆ.

ಸಸ್ಯಗಳಿಗೆ ನೀರು ಬೇಕು. ಅದು ಹೆಚ್ಚಾಗಲೂ ಬಾರದು. ಕಡಿಮೆಯಾಗಲೂ ಬಾರದು. ನೀರು ಹೆಚ್ಚಾದರೆ ಬೇರು ಕೊಳೆಯುತ್ತದೆ. ಕಡಿಮೆಯಾದರೆ ಬೇರು ಸೊರಗುತ್ತದೆ. ಮಳೆಗಾಲದ ಸನ್ನಿವೇಶ ಸಸ್ಯಗಳಿಗೆ ಒಮ್ಮೆ ನೀರಿನ ತೃಷೆಯನ್ನು ನೀಗಿಸುತ್ತದೆಯಾದರೂ ಮಳೆ ತೀವ್ರವಾದಂತೆ ಅದು ಸಸ್ಯದ ಬೆಳವಣಿಗೆಗೆ ಮಾರಕವಾಗಿ ಪರಿಣಮಿಸುತ್ತದೆ. ಸಸ್ಯದ ಬೇರುಗಳ ಮೇಲ್ಮೈಯಲ್ಲಿರುವ ಉಸಿರಾಟದ ಮತ್ತು ಅನಿಲ ವರ್ಗಾವಣೆಯ ಕೋಶಗಳು ನಿಷ್ಕ್ರಿಯವಾಗುತ್ತದೆ. ಇದು ಸಸ್ಯದ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡುತ್ತದೆ. ಮಳೆಗಾಲದ ಪ್ರಾರಂಭದಲ್ಲಿ ಸಸ್ಯಗಳಿಗೆ ಮುಂಗಾರು ಮಳೆ ಸಿಂಚನ ಮತ್ತು ಮಣ್ಣಿನ ಸಡಿಲತೆ ಎಷ್ಟು ಹಿತವಾಯಿತೋ ಅಷ್ಟೇ ಅಧಿಕ ಮಳೆಗೆ ಅದು ಮುಳುವಾಗುತ್ತದೆ.

ಸಸ್ಯಗಳ ಬೇರಿಗೆ ಹೆಚ್ಚುವರಿ ನೀರು ನಿಂತಾಗ ಮಣ್ಣಿನ ಮೇಲ್ಪದರದಲ್ಲಿರುವ ಲವಣಾಂಶಗಳು ನೀರಿನಲ್ಲಿ ಕರಗಿ ಅದು ಬೇರಿನ ಸುತ್ತ ಒಂದು ರೀತಿಯ ಕವಚದಂತಹ ರಚನೆಯನ್ನು ಉಂಟು ಮಾಡುತ್ತದೆ. ಇದರಿಂದ ಉಸಿರುಕಟ್ಟುವಂತಹ ಸ್ಥಿತಿ ಉಂಟಾಗುತ್ತದೆ. ಉಸಿರಾಟ ಕ್ರಿಯೆಗೆ ಅಡ್ಡಿಯಾಗುತ್ತದೆ. ಮೊದಲು ಕವಲು ಬೇರುಗಳು ಕೊಳೆಯಲಾರಂಭಿಸಿ, ತೀವ್ರವಾಗಿದ್ದರೆ ಬಲಿತ ಬೇರುಗಳೂ ಸಹ ಜೀವ ಕಳಕೊಳ್ಳುತ್ತವೆ, ಆ ಸಮಯದಲ್ಲಿ ರೋಗಕಾರಕ ಶಿಲೀಂದ್ರ, ಬ್ಯಾಕ್ಟೀರಿಯಾಗಳು ಬೇರನ್ನು ಆಶ್ರಯಿಸುತ್ತವೆ. ಬೇರು ಕೊಳೆಯುತ್ತದೆ. ಫೈಟೋಪ್ತೆರಾ ಬೇರು ಕೊಳೆ ರೋಗ ಬರುವುದೂ ಇದೇ ಕಾರಣದಿಂದ. ಆ ಸಸಿ ಮತ್ತೆ ಮಳೆಗಾಲ ಕಳೆದ ನಂತರ ಹೊಸ ಬೇರು ಬಿಟ್ಟು ಅದು ಬೆಳೆದು ಆಹಾರ ಸ್ವೀಕರಿಸುವ ಸ್ಥಿತಿಗೆ ಬರಬೇಕು. ಮಳೆಗಾಲ ಕಳೆದ ತಕ್ಷಣ ಸಸಿಗಳು ಕೃಷವಾಗುವುದಕ್ಕೆ ಅದೂ ಒಂದು ಕಾರಣ. ಕೆಲವೊಮ್ಮೆ ಸಸಿಗಳು ಮಳೆಗಾಲ ಮುಗಿಯುವ ಸಮಯದಲ್ಲಿ ಸಾಯುವುದಕ್ಕೂ ಇದೇ ಕಾರಣ.



ಕಳೆದ ವರ್ಷ ಹಲವು ಕಡೆ ಅಡಿಕೆ ಮರಗಳು, ಸಸಿಗಳು ಸತ್ತು ಹೋಗಿದ್ದವು. ಇದಕ್ಕೆ ತಿಂಗಳ ತನಕವೂ ನಿರಂತರವಾಗಿ ಮಳೆ ಸುರಿದುದು ಮುಖ್ಯ ಕಾರಣ. ಇಡೀ ತಿಂಗಳು ಮಳೆ ಸುರಿದ ಕಾರಣ ಮಣ್ಣಿನಲ್ಲಿ ಜಲ ಒಡೆದಿತ್ತು. ಎಷ್ಟೇ ಬಸಿಯುವಿಕೆ ವ್ಯವಸ್ಥೆ ಇದ್ದರೂ ಸಾಕಾಗದ ಪರಿಸ್ಥಿತಿ ಇತ್ತು. ಈ ಸನ್ನಿವೇಶದಲ್ಲಿ ಬೇರುಗಳ ಉಸಿರಾಟ ಕ್ರಿಯೆ ಸಮರ್ಪಕವಾಗಿ ನಡೆಯಲು ಅಸಾಧ್ಯವಾಗಿ ಗಿಡದ ಬೆಳವಣಿಗೆಗೆ ಅಡ್ಡಿಯುಂಟಾಗುತ್ತದೆ. ಹೆಚ್ಚಿನ ಕಡೆ ಇಳುವರಿ ಕಡಿಮೆಯಾಗುವುದಕ್ಕೆ ಇದೂ ಒಂದು ಕಾರಣ.

## ಏನು ಪರಿಹಾರ: ನೆಲದಲ್ಲಿ ಜಲ ಒಡೆಯುವುದು



ಅಧಿಕ ಮಳೆಯಾಗುವ ಪ್ರದೇಶದಲ್ಲಿ ಸಾಮಾನ್ಯವಾದುದು. ಮೇಲು ಸ್ಥರದಲ್ಲಿ ನೀರು ಇಲ್ಲದಂತೆ ಕಂಡರೂ 2- 3 ಅಳದಲ್ಲಿ ನೀರು ಇರುತ್ತದೆ. ಅದನ್ನು ನಿರ್ವಹಣೆ ಮಾಡಿ ಸಮರ್ಪಕವಾಗಿ ಬಸಿಯುವಂತೆ ಮಾಡುವುದು ಅತೀ ಅವಶ್ಯಕ. ನೀರು ಎಷ್ಟೇ ನೆಲದಿಂದ ಮೇಲೇಳಲಿ. ಆ ನೀರು ಹೊರಗೆ ಹರಿದು ಹೋಗುವಂತೆ ವ್ಯವಸ್ಥೆ ಮಾಡಿದರೆ ಸಸ್ಯದ ಬೇರುಗಳ ಉಸಿರಾಟ ಕ್ರಿಯೆಗೆ ಅಡ್ಡಿಯಾಗದು. ಸಸ್ಯದ ಬೇರು ಎಷ್ಟು ಆಳಕ್ಕೆ ಹೋಗುತ್ತದೆಯೋ ಕನಿಷ್ಟ ಅಷ್ಟು ಆಳದ ತನಕ ಕಾಲುವೆ ಮಾಡಿ ನೆಲದಲ್ಲಿ ಜಿನುಗುವ ನೀರು ಚಲನೆಯಾಗಿ ಹೊರ ಹೊಗುವಂತೆ ಮಾಡಬೇಕು. ಕೆಲವರು ನಮ್ಮ ಹೊಲ, ಎತ್ತರದ ಪ್ರದೇಶದಲ್ಲಿ ಇದೆ. ಇಲ್ಲಿ ನೀರು ನಿಲ್ಲುವ ಪ್ರಮೇಯವೇ ಇಲ್ಲ ಎಂದು ಬಸಿ ವ್ಯವಸ್ಥೆಯನ್ನು ಮಾಡುವುದಿಲ್ಲ. ಅಂತಹ ಕಡೆ ಮೇಲೆ ನೋಡುವಾಗ ನೀರು ನಿಂತಿರದಿದ್ದರೂ ಸಹ ತಳ ಭಾಗದಲ್ಲಿ ನೀರು ನಿಂತು ಬೇರಿಗೆ ಹಾನಿ ಉಂಟಾಗುತ್ತದೆ. ಇನ್ನು ತಗ್ಗು ಪ್ರದೇಶಗಳಲ್ಲಿ ಯಾವುದೇ ಕಾರಣಕ್ಕೂ ನೀರು ಬಸಿ ವ್ಯವಸ್ಥೆಯನ್ನು ಮಾಡದೆ ಯಾವುದೇ ಕೃಷಿ ಮಾಡುವುದು ವ್ಯರ್ಥ. ಅಡಿಕೆ, ತೆಂಗು, ಬಾಳೆ ಹಾಗೆಯೇ ಇನ್ಯಾವುದೇ ಕೃಷಿಯಾದರೂ ಸಹ ಎಲ್ಲಾ ಸಸಿಗಳ ಬುಡದಲ್ಲಿ ಸಂಗ್ರಹವಾಗುವ ನೀರು ಬಸಿಯಲ್ಪಡುವಂತೆ ಕಾಲುವೆಗಳನ್ನು ಮಾಡಬೇಕು. ಅಡಿಕೆ ಸಸಿ ನೆಡುವಾಗ ಎರಡು ಸಸಿಗಳ ಮಧ್ಯೆ ಒಂದು ಬಸಿಗಾಲುವೆಯನ್ನು ಅಗತ್ಯವಾಗಿ ಮಾಡಬೇಕು. ತೆಂಗಿನ ಸಸಿ ನಾಟಿ ಮಾಡುವಾಗ ಯಾವ ಪ್ರತೀ ಸಸಿಗೆ ನೀರು ಬಸಿಯುವ ವ್ಯವಸ್ಥೆ ಮಾಡಲೇ ಬೇಕು. ಯಾವುದೇ ಇತರ ಬೆಳೆಗಳಿದ್ದರೂ



ಸಹ ನೀರು ಹೆಚ್ಚು ಸಮಯ ನಿಲ್ಲದ ತರಹ ನೀರು ಬಸಿಯುವ ವ್ಯವಸ್ಥೆಗಳನ್ನು ಮಾಡಿಕೊಂಡರೆ ಮರದ ಆರೋಗ್ಯ ಉತ್ತಮವಾಗಿರುತ್ತದೆ ಉತ್ತಮ ಫಸಲು ದೊರೆಯುತ್ತದೆ. ಸದಾ ನೀರು ನಿಲ್ಲಿಸಿಯೇ ಬೆಳೆಯುವ ಬೆಳೆಯಾದ ಭತ್ತಕ್ಕೂ ಸಹ ಎರಡು ದಿನ ನೀರು ನಿಲ್ಲಿಸಿ, ಮತ್ತೆರಡು ದಿನ ನೀರು ಬಸಿಯುತ್ತಾ ಇದ್ದರೆ ಭತ್ತದ ಪೈರು ಹೆಚ್ಚು ತೆಂಡೆ ಒಡೆಯುತ್ತದೆ, ಅಧಿಕ ಇಳುವರಿ ನೀಡುತ್ತದೆ.

ಬರೇ ಸಸ್ಯ/ಮರದ ಬೇರುಗಳಿಗೆ ನೀರು ಹೆಚ್ಚಾಗುವುದಕ್ಕೋಸ್ಕರ ಬಸಿ ಕಾಲುವೆ ಬೇಕು ಎನ್ನುವುದು ತಪ್ಪು ಅಭಿಪ್ರಾಯ. ಸಸ್ಯದ, ಮರದ ಬೇರುಗಳು ಉಸಿರಾಟ ಕ್ರಿಯೆ ನಡೆಸಲೂ ಸಹ ಅಲ್ಲಲ್ಲಿ ಉಸಿರಾಟಕ್ಕೆ ಅನುಕೂಲವಾಗುವ ಸನ್ನಿವೇಶಗಳು ಬೇಕಾಗುತ್ತವೆ. ಬಸಿಗಾಲುವೆಯ ಬದುಗಳಲ್ಲಿ ಸಸ್ಯದ ಬೇರುಗಳು ನಿಬಿಡವಾಗಿ ಇರುವುದನ್ನು ನಾವು ಗಮನಿಸಿರಬಹುದು. ಇದು ಅದೇ ಕಾರಣಕ್ಕಾಗಿ. ಈ ಭಾಗದಲ್ಲಿ ಅವುಗಳಿಗೆ ಬೇಕಾಗುವ ಆಮ್ಲಜನಕ ಹೇರಳವಾಗಿ ಲಭ್ಯವಾಗುತ್ತದೆ. ಆ ಸನಿಹದಲ್ಲಿರುವ ಸಸ್ಯಗಳು ಹುಲುಸಾಗಿ ಬೆಳೆಯುತ್ತವೆ ಮತ್ತು ಉತ್ತಮ ಇಳುವರಿಯನ್ನೂ ಕೊಡುತ್ತವೆ.

ಸಾಮಾನ್ಯವಾಗಿ ತಲೆಕೂದಲಿನ ತರಹದ ಬೇರುಗಳಿರುವ ಸಸ್ಯಗಳು (ಕರಿಮೆಣಸು, ವೀಳ್ಯದೆಲೆ) ನೀರು ಹೆಚ್ಚು ಸಮಯ ನಿಂತಾಗ ಬೇಗನೆ ಕೊಳೆಯಲಾರಂಭಿಸುತ್ತವೆ. ಸುಮಾರು ಅರ್ಧ ಗಂಟೆ ಕಾಲ ನೀರು ನಿಲ್ಲುವ ಸನ್ನಿವೇಶ ಇದ್ದಲ್ಲಿ ಆ ಸಸ್ಯದ ಕೂದಲು ಬೇರುಗಳು ಕೊಳೆತು ಸಸ್ಯಕ್ಕೆ ಹಾನಿ ಉಂಟಾಗುತ್ತದೆ. ಹೆಚ್ಚಾಗಿ ಬಸಿಗಾಲುವೆ ಪಕ್ಕದಲ್ಲಿ ಇರುವ ಇಂಥಹ ಬಳ್ಳಿಗಳು ಬೇಗ ರೋಗಕ್ಕೆ ತುತ್ತಾಗುವುದಿಲ್ಲ.

ಇತ್ತೀಚೆಗೆ ಕಂಡು ಕೊಂಡ ಪ್ರಕಾರ ಬೇರು ವಲಯಕ್ಕೆ ಸಾಕಷ್ಟು ಆಮ್ಲಜನಕ ದೊರಕಿಸಿಕೊಡಲು ಅಂತರ್ಗತ ಬಸಿಗಾಲುವೆಗಳು ಸಹಕಾರಿಯಾಗುತ್ತವೆ. ಅಂತರ್ಗತ ಬಸಿಗಾಲುವೆ ಮಾಡಿದಲ್ಲಿ ಎಷ್ಟೇ ಜಲ ಒಡೆದರೂ ಸಹ ಅದು ತಕ್ಷಣ ಕಾಲುವೆಯ ಮೂಲಕ ಹೊರಹೋಗುವ ಕಾರಣ ಬಸಿಯುವಿಕೆ ನಿರಂತರವಾಗಿರುತ್ತದೆ. ಬೇರು ವಲಯಕ್ಕೆ ಬೇಕಾಗುವ ಆಮ್ಲಜನಕದ ಲಭ್ಯತೆಯೂ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗುತ್ತಿರುತ್ತದೆ. ಬಸಿಗಾಲುವೆ ಇಲ್ಲದ ತೋಟ ಅದು ಗುಡ್ಡದ ತೋಟವೇ ಆಗಿದ್ದರೂ ಸಹ ಇಳುವರಿ ಕಡಿಮೆ, ಮರದ ಆಯುಷ್ಯವೂ ಕಡಿಮೆ. ಮರಕ್ಕೆ ಶಕ್ತಿಯೂ ಕಡಿಮೆ ಎಂಬುದು ಸತ್ಯ.

– **ರಾಧಾಕೃಷ್ಣ** ಹೊಳ್ಳ

# ಕಲ್ಲು

ಕೋಟೆಯ ಕಲ್ಲುಗಳು ಮಾತನಾಡಬೇಕಿತ್ತು, ಆಗ ಪ್ರತಿಯೊಬ್ಬರ ಕಥೆಯೂ ಜಗತ್ತಿಗೆ ಪರಿಚಯವಾಗ್ತಾ ಇತ್ತು. ಈಗ ಎಲ್ಲ ರಾಜರ ಕಥೆಗಳು ಇತಿಹಾಸಕಾರರು ಬಿಟ್ಟು ಹೋದ ಹಾಗೆ ರಾಜರು ಕಟ್ಟು ಹಿಡಿದು ಹೇಳಿಸಿದ ಹಾಗೆ ನಮ್ಮ ಕಿವಿಗೆ ಕಣ್ಣುಗಳಿಗೆ ತಲುಪುತ್ತಿವೆ. ಆದರೆ, ಆ ಕೋಟೆಯ ಪ್ರತಿಯೊಂದು ಕಲ್ಲುಗಳು ಕಥೆ ಹೇಳಿದಿದ್ರೆ, ಅವನ ಮೋಸ ವಂಚನೆ. ಆತನ ಪರಾಕ್ರಮ ಮುಚ್ಚಿಟ್ಟ ಸತ್ಯ ಆತನಿಗೆ ಎದುರಾದ ಸಂಶಯ ಇವೆಲ್ಲವೂ ಕೂಡ ಕಣ್ಣೆದುರು ಬಯಲಾಗ್ತಾ ಇತ್ತು. ಆ ರಾಜ್ಯದ ಒಳಗಡೆ ನಡೆದ ಸಣ್ಣಪುಟ್ಟ ಘಟನೆಗಳು ರಾಜ್ಯ ಅಧಃಪತನಕ್ಕೆ ಕಾರಣವಾದ ಸನ್ನಿವೇಶಗಳು ಒಳಗೊಳಗೆ ನಡೆಯುತ್ತಿದ್ದ ಮೋಸ ಅಸೂಯೆ, ಎಲ್ಲವೂ ಬಟಾ ಬಯಲಾಗ್ತಾ ಇತ್ತು ಅದಕ್ಕೆ ಕಲ್ಲಿಗೆ ಮಾತನಾಡಬಾರದು ಅಂತ ಹೇಳಿಬಿಟ್ಟಿದ್ದರೇನು ಈಗಲೂ ಕಲ್ಲುಗಳು ಕಥೆ ಹೇಳುವುದಕ್ಕೆ ಅಲ್ಲಲ್ಲಿ ನಿಂತುಬಿಟ್ಟಿದೆ ಆದರೆ ಯಾರೂ ಮಾತುಕೊಟ್ಟಿಲ್ಲ. ಕಲ್ಲುಗಳು ಕಾಯುತ್ತಿವೆ... ಮಾತು ಆಡಲು

– **ಧೀರಜ್** ಬೆಳ್ಳಾರೆ



# ದೇಶ ಮುನ್ನಡೆಸಲು ಪ್ರಧಾನಿಗೆ ಮತ್ತಷ್ಟು ಶಕ್ತಿ ದೊರಕಲಿ

## ಪ್ರಧಾನಮಂತ್ರಿಯಾಗಿ 12 ವರ್ಷ ಪೂರ್ಣಗೊಳಿಸಿದ ನರೇಂದ್ರ ಮೋದಿಗಾಗಿ ದೇವಾಲಯದಲ್ಲಿ ವಿಶೇಷ ಪೂಜೆ


• ಪ್ರಜೋದಯ ವರದಿ

**ಸಕಲೇಶಪುರ:** ಪ್ರಧಾನಮಂತ್ರಿಯಾಗಿ 12 ವರ್ಷಗಳ ಸೇವಾ ಪಯಣ ಪೂರ್ಣಗೊಳಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರ ದೀರ್ಘಾಯುಷ್ಯ, ಉತ್ತಮ ಆರೋಗ್ಯ ಹಾಗೂ ದೇಶವನ್ನು ಮತ್ತಷ್ಟು ಶಕ್ತಿಯುತವಾಗಿ ಮುನ್ನಡೆಸುವ ಸಾಮರ್ಥ್ಯ ದೊರಕಲಿ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಶ್ರೀ ಸಕಲೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಭಾಗವಹಿಸಿ ಮಾತನಾಡಿದ ಅವರು, ದೇಶದ ನಾಯಕತ್ವ ಎಂದರೆ ಕೇವಲ ಆಡಳಿತವಲ್ಲ, ಅದು ಕೋಟ್ಯಂತರ ಜನರ ಆಶಯ ಮತ್ತು ನಿರೀಕ್ಷೆಗಳನ್ನು ಹೊತ್ತು ಸಾಗುವ ಜವಾಬ್ದಾರಿ. ಆ ಜವಾಬ್ದಾರಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ 12 ವರ್ಷಗಳಿಂದ ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು.

ದೇಶದ ಕಟ್ಟ ಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳು ತಲುಪಬೇಕು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದಿದೆ. ಮಹಿಳೆಯರ ಸಬಲೀಕರಣಕ್ಕಾಗಿ ಮನೆ - ಮನೆಗೆ ಶೌಚಾಲಯ ನಿರ್ಮಾಣ, ಜಲ್ ಜೀವನ್ ಮಿಷನ್ ಮೂಲಕ ಕುಡಿಯುವ ನೀರಿನ ವ್ಯವಸ್ಥೆ, ಉಜ್ವಲ ಯೋಜನೆಯಡಿ ಅಡುಗೆ ಅನಿಲ ಸಂಪರ್ಕ, ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ವಸತಿ ಸೌಲಭ್ಯ, ಆಯುಷ್ಮಾನ್ ಭಾರತ್ ಯೋಜನೆಯಡಿ ಆರೋಗ್ಯ ರಕ್ಷಣೆ ಹಾಗೂ ಜನಧನ್ ಯೋಜನೆಯ ಮೂಲಕ ಬ್ಯಾಂಕಿಂಗ್ ಸೇವೆಗಳನ್ನು ಸಾಮಾನ್ಯ ಜನರಿಗೆ ತಲುಪಿಸಲಾಗಿದೆ ಎಂದು ಶಾಸಕರು ತಿಳಿಸಿದರು.

ರೈತರ ಆರ್ಥಿಕ ಬಲವರ್ಧನೆಗಾಗಿ



ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆ, ಸಣ್ಣ ವ್ಯಾಪಾರಿಗಳು ಹಾಗೂ ಯುವ ಉದ್ಯಮಿಗಳಿಗೆ ಮುದ್ರಾ ಯೋಜನೆ, ದೇಶವನ್ನು ಡಿಜಿಟಲ್ ವ್ಯವಸ್ಥೆಯತ್ತ ಕೊಂಡೊಯ್ಯಲು ಡಿಜಿಟಲ್ ಇಂಡಿಯಾ, ಸ್ವಚ್ಛತೆ ಮತ್ತು ಸಾರ್ವಜನಿಕ ಆರೋಗ್ಯಕ್ಕಾಗಿ ಸ್ವಚ್ಛ ಭಾರತ್ ಅಭಿಯಾನ, ದೇಶೀಯ ಉತ್ಪಾದನೆ ಹಾಗೂ ಉದ್ಯೋಗ ಸೃಷ್ಟಿಗೆ ಮೇಕ್ ಇನ್ ಇಂಡಿಯಾ ಸೇರಿದಂತೆ ಹಲವು ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗಿದೆ ಎಂದು ತಿಳಿಸಿದರು.

ಭಾರತವು ಜಾಗತಿಕ ಮಟ್ಟದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುವ ದಿಸೆಯಲ್ಲಿ ಅಭಿವೃದ್ಧಿ, ಮೂಲ ಸೌಕರ್ಯ, ತಂತ್ರಜ್ಞಾನ ಹಾಗೂ ಜನಕಲ್ಯಾಣ ಕಾರ್ಯಕ್ರಮಗಳ ಮೂಲಕ ಹೊಸ ಹೆಜ್ಜೆ ಇಡುತ್ತಿದೆ. ಪ್ರಧಾನಿ ಮೋದಿ ಅವರಿಗೆ ಭಗವಂತ ಇನ್ನಷ್ಟು ಆರೋಗ್ಯ, ಆಯುಷ್ಯ ಹಾಗೂ ದೇಶಸೇವೆಯ ಶಕ್ತಿ ನೀಡಲಿ. ಭಾರತ ಇನ್ನಷ್ಟು ಅಭಿವೃದ್ಧಿ ಹೊಂದಿ ವಿಶ್ವದ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಲಿ ಎಂಬುದು ನಮ್ಮೆಲ್ಲರ ಪ್ರಾರ್ಥನೆಯಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಬಿಜೆಪಿ ಹಿರಿಯ ಮುಖಂಡರಾದ ಬ್ಯಾಕರವಳ್ಳಿ ಜಯಣ್ಣ, ಬಾಗೆ ಜಯಪ್ರಕಾಶ್, ರಾಮಚಂದ್ರು, ಶಶಿಕುಮಾರ್, ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಗ್ನಿ ಸೋಮಶೇಖರ್, ಬಿಜೆಪಿ ಮಹಿಳಾ ಮೋರ್ಚಾ ತಾಲ್ಲೂಕು ಅಧ್ಯಕ್ಷೆ ಬಬಿತಾ ವಿಶ್ವನಾಥ್, ಪಕ್ಷದ ಮುಖಂಡರಾದ ರಾಜಕುಮಾರ್, ವನಜಾಕ್ಷಿ, ಚೇತನ, ಗಣೇಶ್‌ಬಾಬು, ಪರಮೇಶ್, ಭಾಸ್ಕರ್, ಮದನ್, ವಿನಯ್, ಹರೀಶ್ ಆಚಾರ್, ಮೋಹನ್, ಸತ್ಯಣ್ಣ ಸೇರಿ ಹಲವರು ಉಪಸ್ಥಿತರಿದ್ದರು.

---

### ವಿದ್ಯುತ್ ವಿತರಣಾ ವ್ಯವಸ್ಥೆ ಖಾಸಗೀಕರಣ ವಿರೋಧಿಸಿ

# ಸೆಸ್ಕ್ ಕಚೇರಿ ಎದುರು ರೈತ ಸಂಘ ಪ್ರತಿಭಟನೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಸರ್ಕಾರ ಖಾಸಗೀಕರಣಗೊಳಿಸುತ್ತಿರುವುದು ರೈತ ಹಾಗೂ ಕಾರ್ಮಿಕ ವಿರೋಧಿಯಾಗಿದೆ ಎಂದು ಆರೋಪಿಸಿ ಸಂಘ, ಸಂಸ್ಥೆಗಳು ಪಟ್ಟಣದ ಸೆಸ್ಕ್ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿ ರೈತ ಸಂಘದ ಸದಸ್ಯರು ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ವಿದ್ಯುತ್ ವಿಸ್ತರಣಾ ವ್ಯವಸ್ಥೆಯನ್ನು ಖಾಸಗಿಗೆ ವಹಿಸುವುದರಿಂದ ಪ್ರಸ್ತುತ ಸರ್ಕಾರದ ಗ್ಯಾರಂಟಿ ಯೋಜನೆಯಲ್ಲಿ ಒಂದಾದ ಉಚಿತ ವಿದ್ಯುತ್ ಸೌಲಭ್ಯಕ್ಕೆ ಕುತ್ತು ಬರಲಿದೆ. ಆಗಾಗ್ಗೆ ವಿದ್ಯುತ್ ದರ ಸಹ ಹೆಚ್ಚಿಸುವ ಹುನ್ನಾರ ನಡೆಸಲಾಗುತ್ತಿದೆ. ರೈತರ ಕೃಷಿ ನೀರಿನ ಅಗತ್ಯತೆ ಇದ್ದೇ ಇದೆ. ಖಾಸಗೀಕರಣದಿಂದ ಶುಲ್ಕ ಪಾವತಿಸುವ ವ್ಯವಸ್ಥೆ ಜಾರಿಗೊಳಿಸಲೂಬಹುದು. ಇದರಿಂದ ರೈತರಿಗೆ ಆರ್ಥಿಕ ಹೊರೆಹೊರಿಸಲಾಗಬಹುದು ಎಂದು ಆಕ್ರೋಶ ವ್ಯಕ್ತಪಡಿಸಿದರು.



ಸರ್ಕಾರದ ಯೋಜನೆಗಳಾದ ಗೃಹ ಜ್ಯೋತಿ, ನಿರಂತರ ಜ್ಯೋತಿ, ಗಂಗಾ ಕಲ್ಯಾಣ ಇವುಗಳು ಹದಗೆಡಲಿದೆ. ತಾಂತ್ರಿಕ ಸವಾಲುಗಳನ್ನು ಎದುರಿಸಿ ಈವರೆಗೂ ಜನ ಜೀವನ ವ್ಯವಸ್ಥೆ ಸುಗಮಗೊಳಿಸಿದ ವಿದ್ಯುತ್ ವಿತರಣಾ ಕಾರ್ಮಿಕರೂ ಬೀದಿಪಾಲಾಗುವರು. ಒಟ್ಟಾರೆ ಸರ್ಕಾರ ಖಾಸಗಿ ಕಂಪನಿಯೊಂದಿಗೆ ಮಾಡಿಕೊಂಡಿರುವ ಒಪ್ಪಂದದಿಂದ ರೈತರು, ಕಾರ್ಮಿಕರು ಮತ್ತು ಬಡ ವರ್ಗ ಬೀದಿಗೆ ಬೀಳಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ರೈತ ಸಂಘದ ಅಧ್ಯಕ್ಷ ಸೋಮಶೇಖರ್, ಜಿಲ್ಲಾ ಕಾರ್ಯದರ್ಶಿ ನರಸಿಂಹಶೆಟ್ಟಿ, ತಾಲೂಕು ಘಟಕದ ಕಾರ್ಯದರ್ಶಿ ಎ.ಬಿ.ರಂಗಸ್ವಾಮಿ ಇನ್ನಿತರರು ಹಾಜರಿದ್ದರು.

---

# ವಾಹನ ನಿಲುಗಡೆ ಸ್ಥಳ ಗುರುತಿಸಿ

• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ವಾಹನ ನಿಲುಗಡೆ ಸ್ಥಳ ಗುರುತಿಸಲು ಪೊಲೀಸ್, ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಹಾನಗರ ಪಾಲಿಕೆ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು, ತಹಸಿಲ್ದಾರ್ ಸೇರಿದಂತೆ ಸಮಿತಿಯನ್ನು ರಚಿಸಿ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ಜಿಲ್ಲಾ ರಸ್ತೆ ಸುರಕ್ಷತೆ ಪ್ರಾಧಿಕಾರದ ಸಭೆ ನಡೆಸಿ ಮಾತನಾಡಿದ ಅವರು, ನಗರದ ಪ್ರಮುಖ ರಸ್ತೆಗಳಲ್ಲಿ ಹಾಗೂ ವೃತ್ತಗಳಲ್ಲಿ ಮಧ್ಯದಲ್ಲಿ ಅಳವಡಿಸಿರುವ ಬ್ಯಾನರ್ ಕಡ್ಡಾಯವಾಗಿ ತೆರವುಗೊಳಿಸಲು ಅಧಿಕಾರಿಗಳಿಗೆ ತಿಳಿಸಿದರು.

ರಸ್ತೆ ಸುರಕ್ಷತೆಯ ಕುರಿತು ಪೋಸ್ಟರ್‌ಗಳನ್ನು ಶಾಲೆಗಳಲ್ಲಿ ಅಳವಡಿಸುವಂತೆ ಹಾಗೂ ಮಳೆಗಾಲ ಆರಂಭವಾಗುತ್ತಿದ್ದು ನಗರದ ಎಲ್ಲೆಡೆ ಚರಂಡಿ ಸ್ವಚ್ಛಗೊಳಿಸುವಂತೆ ಅವರು ಸೂಚಿಸಿದರು.

ಸೂಚನಾ ನಾಮಫಲಕಗಳನ್ನು ಅಳವಡಿಸುವಂತೆ ಹಾಗೂ ವೇಗ ನಿಯಂತ್ರಣ ನಾಮಫಲಕಗಳನ್ನೂ ಅಳವಡಿಸುವಂತೆ ಹಾಗೂ ರಾತ್ರಿ ವೇಳೆಯಲ್ಲಿ ಖಾಸಗಿ ಬಸ್‌ಗಳನ್ನೂ ನಗರ ಪ್ರವೇಶವನ್ನು ನಿಷೇಧಿಸಬೇಕು. ಕೆಎಸ್‌ಆರ್‌ಟಿಸಿ ಬಸ್‌ಗಳು ಸೂಕ್ತ ಮಾರ್ಗವನ್ನು ಗುರುತಿಸಿ ಕಡ್ಡಾಯವಾಗಿ ಅದೇ ಮಾರ್ಗದಲ್ಲಿ ಚಲಿಸುವಂತೆ ಚಾಲಕರಿಗೆ ನಿರ್ದೇಶನ ನೀಡುವಂತೆ ಜಿಲ್ಲಾಧಿಕಾರಿ ಲತಾ ಕುಮಾರಿ ಸೂಚಿಸಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಾರುತಿ, ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಕಾಶ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

---

# ಡಿಪ್ಲೋಮ ಕೋರ್ಸ್‌ಗಳಿಗೆ ಅರ್ಜಿ

**ಹಾಸನ:** ಲ್ಯಾಟರಲ್ ಎಂಟ್ರಿ ಸ್ಕೀಂ ಮುಖಾಂತರ ಮೂರನೇ ಸೆಮಿಸ್ಟರ್ ಡಿಪ್ಲೋಮ ಕೋರ್ಸ್‌ಗಳಿಗೆ 2026-27 ನೇ ಸಾಲಿನಲ್ಲಿ ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಮೊಸಳೆ ಹೊಸಹಳ್ಳಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಂಶುಪಾಲರಾದ ಎಸ್.ಬಿ.ಉಷಾರಾಣಿ ತಿಳಿಸಿದ್ದಾರೆ.

ಪ್ರವೇಶಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನ ಮೊಸಳೆಹೊಸಹಳ್ಳಿ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿರುವ ಸಿವಿಲ್, ಕಂಪ್ಯೂಟರ್ ಸೈನ್ಸ್ , ಎಲೆಕ್ಟ್ರಾನಿಕ್ಸ್ ಮತ್ತು ವಿದ್ಯುತ್ ವಿಭಾಗಗಳಲ್ಲಿ ಸೀಟುಗಳು ಲಭ್ಯವಿದ್ದು, 02 ವರ್ಷಗಳ ಐಟಿಐ , ದ್ವಿತೀಯ ಪಿಯುಸಿ, ವಿಜ್ಞಾನ/ ತಾಂತ್ರಿಕ ವಿಷಯಗಳಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳು ಮೂರನೇ ಸೆಮಿಸ್ಟರ್‌ಗೆ ಆಫ್‌ಲೈನ್ ಮೂಲಕ ಕಾಲೇಜಿನಲ್ಲಿ ಪ್ರವೇಶ ಪಡೆಯಬಹುದಾಗಿರುತ್ತದೆ.

ಜೂ.20 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತಾದೆ, ಆಸಕ್ತ ಅಭ್ಯರ್ಥಿಗಳು ಕಾಲೇಜಿನಲ್ಲಿ ಅರ್ಜಿಯನ್ನು ಸಲ್ಲಿಸಿ, ಪ್ರವೇಶ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ದೂ. ಸಂಖ್ಯೆ 9019748969. 7259787711. 97382819135ಗೆ ಸಂಪರ್ಕಿಸಬಹುದಾಗಿದೆ.

---

# ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳು ಲಭ್ಯವಿರುವಂತೆ ಗಮನಹರಿಸಿ

## ಜಿಲ್ಲಾ ಪಂಚಾಯಿತಿ ಸಿಇಒ ಶುಭಂ ಶುಕ್ಲಾ ಭೇಟಿ, ಪರಿಶೀಲನೆ

• ಪ್ರಜೋದಯ ವರದಿ

**ಹಾಸನ:** ಸರ್ಕಾರಿ ಆಸ್ಪತ್ರೆಗಳಲ್ಲಿ ಸಕಾಲದಲ್ಲಿ ಚುಚ್ಚುಮದ್ದುಗಳು ಹಾಗೂ ಔಷಧಿಗಳು ಲಭ್ಯವಿರುವಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಶುಭಂ ಶುಕ್ಲಾ ತಿಳಿಸಿದ್ದಾರೆ.

ಅರಸೀಕೆರೆ ತಾಲ್ಲೂಕಿನ ಉಂಡಿಗನಾಳು, ಬಂದೂರು ಹಾಗೂ ಜಾವಗಲ್ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ವಿವಿಧ ಯೋಜನೆಗಳಡಿ ಅನುಷ್ಠಾನ ಮಾಡಲಾಗಿರುವ ಕಾಮಗಾರಿಗಳನ್ನು ಪರಿಶೀಲಿಸಿದರಲ್ಲದೆ, ಉಂಡಿಗನಾಳು ಗ್ರಾಮ ಪಂಚಾಯಿತಿಯ ಪ್ರಾಥಮಿಕ ಚಿಕಿತ್ಸಾ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿಯ ವ್ಯವಸ್ಥೆಗಳ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದರು. ಆಸ್ಪತ್ರೆಗೆ ಭೇಟಿ ನೀಡಿದ್ದ ರೋಗಿಗಳು ಹಾಗೂ ಸಾರ್ವಜನಿಕರ ಕುಂದು- ಕೊರತೆಗಳನ್ನು ಆಲಿಸಿದರು.



ಅಂಗನವಾಡಿಯಲ್ಲಿ ಅಳವಡಿಸಿರುವ ನಲ್ಲಿಯಲ್ಲಿ ನೀರು ಬರದಿರುವುದನ್ನು ಗಮನಿಸಿ ಕೂಡಲೇ ಸರಿಪಡಿಸಿ ವರದಿ ಮಾಡುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಜಲ ಜೀವನ್ ಮಿಷನ್ ಯೋಜನೆಯಡಿ ಪೈಪ್ ಲೈನ್ ಅನ್ನು ಚರಂಡಿಯಲ್ಲಿಯೇ ಅಳವಡಿಸಿರುವುದನ್ನು ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ ಸರಿಪಡಿಸುವಂತೆ ತಿಳಿಸಿದರು.

5054 ಯೋಜನೆಯಡಿ ಅನುಷ್ಠಾನ ಮಾಡಲಾಗಿರುವ ಸಿಸಿ ರಸ್ತೆಗಳನ್ನು ಪರಿಶೀಲಿಸಿ. ಖುದ್ದಾಗಿ ಅಳತೆ ಪ್ರಮಾಣಗಳನ್ನು ಪರಿಶೀಲಿಸಿ ನ್ಯೂನ್ಯತೆಗಳನ್ನು ಸರಿಪಡಿಸುವಂತೆ ಸೂಚಿಸಿದರು. ಬಂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಲಿಂಗ್ಲಾಪುರ ಗ್ರಾಮಕ್ಕೆ ಹೋಗುವ ಡಾಂಬರು ರಸ್ತೆಯನ್ನು ಪರಿಶೀಲಿಸಿದರು.

ಜಾವಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆ.ಪಿ.ಎಸ್. ಶಾಲೆಗೆ ಭೇಟಿ ನೀಡಿ ಶಾಲೆಯ ಸ್ವಚ್ಛತೆಯನ್ನು ಕಾಪಾಡುವಂತೆ ಹಾಗೂ ನೀರು ಪೋಲಾಗದಂತೆ ನಲ್ಲಿಗಳನ್ನು ಅಳವಡಿಸಬೇಕು. ಶಾಲಾ ಆವರಣದಲ್ಲಿ ನರೇಗಾ ಯೋಜನೆಯಡಿ ನಿರ್ಮಾಣವಾಗಿರುವ ಶಾಲಾ ಶೌಚಾಲಯ ಹಾಗೂ ಶಾಲಾ ಅಡುಗೆ ಕೋಣೆ ಕಾಮಗಾರಿಗಳನ್ನು ಪರಿಶೀಲಿಸಿ ನ್ಯೂನ್ಯತೆಗಳನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಸೂಚಿಸಿದರು.

ನಂತರ ಶಾಲಾ ಮಕ್ಕಳೊಂದಿಗೆ ಸಮಾಲೋಚಿಸಿ ಶಾಲೆಯಲ್ಲಿ ಏನಾದರೂ ಕುಂದು- ಕೊರತೆಗಳಿವೆಯೇ ಎಂಬುದಾಗಿ ವಿಚಾರಿಸಿ ತಿಳಿದುಕೊಂಡರು.

ಈ ಸಂದರ್ಭದಲ್ಲಿ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

---

# ಕಲ್ಲು ಗಣಿಗಾರಿಕೆಯಿಂದ ರೈತರಿಗೆ ತೊಂದರೆ: ಆಕ್ರೋಶ

• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕಿನ ಕಲ್ಲೊಡ್ಡೆ ಬೋರೆ ಕಾವಲ್ ಅರಣ್ಯ ಪ್ರದೇಶದಲ್ಲಿ ಕಾನೂನು ಬಾಹಿರವಾಗಿ ಪರವಾನಗಿ ಪಡೆದು ನಡೆಸಿರುವ 5 ಕಲ್ಲು ಗಣಿಗಾರಿಕೆಯಿಂದ ಸುತ್ತಮುತ್ತಲಿನ ರೈತರು ಕಷ್ಟ, ನಷ್ಟ ಅನುಭವಿಸುವಂತಾಗಿದೆ ಎಂದು ತಾಲ್ಲೂಕು ಕುರುಬರ ಸಂಘ ಆಕ್ರೋಶ ವ್ಯಕ್ತಪಡಿಸಿದೆ.

ಪಟ್ಟಣದ ಕನಕಭವನದಲ್ಲಿ ಕಲ್ಲು ಗಣಿಗಾರಿಕೆಯಿಂದ ನೊಂದ ರೈತರ ಸಮಸ್ಯೆ ಕುರಿತು ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಕುರುಬರ ಸಂಘದ ತಾಲೂಕು ಅಧ್ಯಕ್ಷ ಪುಟ್ಟಸ್ವಾಮಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕುರುಬ ಸಮುದಾಯದ ಮುಖಂಡ ಹಾಗೂ ಕಾಂಗ್ರೆಸ್ ಹಳ್ಳಿಮೈಸೂರು ಬ್ಲಾಕ್ ಅಧ್ಯಕ್ಷ ರಾಜೇಗೌಡ, ಮೆಣಗನಹಳ್ಳಿ ರೈತ ಎಂ.ಎನ್.ಚಂದ್ರಶೇಖರ್ ಮಾತನಾಡಿ, ಪಟ್ಟಣದಿಂದ ಮೈಸೂರಿಗೆ ತೆರಳುವ ಮಾರ್ಗದ ಚಿಕ್ಕಕಾಡನೂರು ಮತ್ತು ಮೆಣಗನಹಳ್ಳಿ ನಡುವೆ ಪುಷ್ಪಗಿರಿ ಹೆಸರಿನ ಗಣಿಯೂ ಸೇರಿದಂತೆ ಒಟ್ಟು 5 ಕಲ್ಲುಗಣಿಗಾರಿಕೆ ನಡೆದಿದೆ. ದಾಳಗೌಡನಹಳ್ಳಿ, ಚಿಕ್ಕಕಾಡನೂರು, ಮೆಣಗನಃಳಿ, ಕೊಪ್ಪಲುಗಳು ಸೇರಿ ಹತ್ತು ಹಳ್ಳಿಗಳು ಸಮಸ್ಯೆಯಲ್ಲಿ ತೊಳಲಾಡುವಂತಾಗಿದೆ. ಎಷ್ಟೇ ಬಾರಿ ಆರೋಪಿಸಿದರೂ, ಕಳೆದ 10 ವರ್ಷಗಳಿಂದ ನಿರಂತರ ಗಣಿಗಾರಿಕೆ ನಡೆಸಲಾಗುತ್ತಿದೆ. ಕೆಲವು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಪೂರ್ವಗ್ರಹಪೀಡಿತರಾಗಿ ಒತ್ತು ನೀಡುತ್ತಿರುವುದೇ ಗಣಿಗಾರರಿಗೆ ಆನೆಬಲವಾಗಿದೆ ಎಂದು ದೂರಿದರು.



ಗುಡ್ಡೇನಹಳ್ಳಿ ಏತ ನೀರಾವರಿ ನಾಲೆ ಸಹ ಗಣಿಗಾರಿಕೆ ಪಕ್ಕದಲ್ಲೇ ಹಾದು ಹೋಗುತ್ತದೆ. ಗಣಿಗಾರಿಕೆಯಿಂದ ನಾಲೆ ಸಹ ಅದುರಿದೆ. ಅರಕಲಗೂಡು ವಿಧಾನ ಸಭಾ ವ್ಯಾಪ್ತಿಗೆ ಸೇರುವ ಕಾರಣ ಶಾಸಕ ಎ.ಮಂಜು ಹಾಗೂ ತಾಲೂಕು ಆಡಳಿತ ವ್ಯಾಪ್ತಿಗೆ ಒಳಪಡುವ ಹಳ್ಳಿಮೈಸೂರು ಹೋಬಳಿಯಾದ್ದರಿಂದ ಶಾಸಕ ಎಚ್.ಡಿ.ರೇವಣ್ಣ ಸಹ ವಿಧಾನ ಸಭೆಯಲ್ಲಿ ಒಂದೆರಡು ಬಾರಿ ಸಮಸ್ಯೆ ಅನಾವರಣ ಗೊಳಿಸಿದ್ದಾರೆ. ಆದರೂ ಪ್ರಭಾವಿ ಗಣಿಗಾರರು ಕಿಂಚಿತ್ತೂ ಕುಂದಿಲ್ಲ. ಗಣಿಗಾರಿಕೆ ಸ್ಥಗಿತವಾಗುವವರೆಗೂ ನಿರಂತರ ಹೋರಾಟ ನಡೆಸಲು ತೀರ್ಮಾನಿಸಿದ್ದೇವೆ ಎಂದರು.

ಕುರುಬರ ಸಂಘದ ಕಾರ್ಯದರ್ಶಿ ಧಶರಥ್, ಮುಖಂಡರಾದ ಬಾಗೀವಾಳು ಮಂಜುನಾಥ್, ಯೋಗೇಶ್, ಹೊನ್ನಿಕೊಪ್ಪಲು ಮಂಜುನಾಥ್, ಕೆಪಿಸಿಸಿ ಮಾಜಿ ನಿರ್ದೇಶಕ ಪುಟ್ಟರಾಜು ಹಾಗೂ ಶಿವಣ್ಣ ಉಪಸ್ಥಿತರಿದ್ದರು.

---

# ಕೇಂದ್ರ ಸಚಿವರನ್ನು ಭೇಟಿಯಾದ ಸಿಎಂ ಡಿ.ಕೆ.ಶಿ.

• ಪ್ರಜೋದಯ ವರದಿ

**ನವದೆಹಲಿ:** ಸಿಎಂ ಡಿ.ಕೆ.ಶಿವಕುಮಾರ್ ಅವರು ಬುಧವಾರ ಕೇಂದ್ರ ಇಂಧನ, ವಸತಿ ಮತ್ತು ನಗರಾಭಿವೃದ್ಧಿ ಸಚಿವ ಮನೋಹರಲಾಲ್ ಖಟ್ಟರ್ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ ಅಹವಾಲು ಸಲ್ಲಿಸಿದರು.

**ಡಬಲ್ ಡೆಕ್ಕರ್ ಯೋಜನೆಗೆ ಅನುಮತಿ:** ಮೆಟ್ರೋ ಮೂರನೇ ಹಂತ ಯೋಜನೆಯಲ್ಲಿ 44.65 ಕಿ.ಮೀ ಉದ್ದದ ಡಬಲ್ ಡೆಕ್ಕರ್ ಮೇಲ್ಸೇತುವೆ ನಿರ್ಮಾಣಕ್ಕೆ ಬಿಎಂಆರ್ ಸಿಎಲ್ ಮುಂದಾಗಿದ್ದು, ದಿನಾಂಕ 13-09-2024ರಂದು ಕೇಂದ್ರ ಸರ್ಕಾರ ಇದಕ್ಕೆ ಅನುಮತಿ ನೀಡಿತ್ತು. ಈ ಯೋಜನೆಯ ವೆಚ್ಚ 9,700 ಕೋಟಿ ರೂ. ಅನ್ನು ಕರ್ನಾಟಕ ಸರ್ಕಾರವೇ ಭರಿಸಲಿದೆ. 19-01-2026 ರಂದು ಬಿಎಂಆರ್ ಸಿಎಲ್ ಮಂಡಳಿಯ 118ನೇ ಸಭೆಯಲ್ಲಿ ಸಣ್ಣ ಬದಲಾವಣೆ ಪ್ರಸ್ತಾಪ ಮಾಡಿದ್ದು, ಕೇಂದ್ರ ಸರ್ಕಾರ ಈ ಯೋಜನೆಯನ್ನು ಆರಂಭಿಸಲು ಬಿಎಂಆರ್ ಸಿಎಲ್ ಗೆ ಅನುಮತಿ ನೀಡಬೇಕು.



**ಮೆಟ್ರೋ 2ನೇ ಹಂತದ ಪರಿಷ್ಕೃತ ಯೋಜನಾ ವೆಚ್ಚಕ್ಕೆ ಅನುಮತಿ**

ಈ ಯೋಜನೆಗೆ ಕೇಂದ್ರ ಸರ್ಕಾರ 21-02-2014ರಂದು 26,405.14 ಕೋಟಿ ರೂ. ಅಂದಾಜು ವೆಚ್ಚಕ್ಕೆ ಅನುಮತಿ ನೀಡಿತ್ತು. 72.095 ಕಿ.ಮೀ ಉದ್ದ ಹಾಗೂ 61 ನಿಲ್ದಾಣಗಳನ್ನು ಒಳಗೊಂಡಿರುವ ಈ ಯೋಜನೆ ಅಂದಾಜು ವೆಚ್ಚ ಈಗ 40,425.02 ಕೋಟಿ ರೂ.ಗೆ ಅಂದರೆ 14,019.88 ಕೋಟಿ ರೂ. ಏರಿಕೆ ಮಾಡಲಾಗಿದ್ದು, ಆದಷ್ಟು ಬೇಗ ಈ ಪರಿಷ್ಕೃತ ಯೋಜನಾ ವೆಚ್ಚಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕು.

**ಮೆಟ್ರೋ 3ನೇ ಎ ಹಂತಕ್ಕೆ ಅನುಮತಿ**

ಈ ಯೋಜನೆ ಸರ್ಜಾಪುರದಿಂದ ಹೆಬ್ಬಾಳದವರೆಗೆ ಒಟ್ಟು 37.804 ಕಿ.ಮೀ (14.28 ಕಿ.ಮೀ ಸುರಂಗ ಹಾಗೂ 23.524 ಕಿ.ಮೀ ಮೇಲ್ಸೇತುವೆ) ಉದ್ದವಿದ್ದು, ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಕೆಲವು ಮಾರ್ಪಾಡು ಮಾಡಲಾಗಿದ್ದು, 25,999 ಕೋಟಿ ರೂ. ಅಂದಾಜು ವೆಚ್ಚದ ಪರಿಷ್ಕೃತ ಡಿಪಿಆರ್ ಅನ್ನು 29-04-2026ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಕೆ ಮಾಡಲಾಗಿದ್ದು, ಆದಷ್ಟು ಬೇಗ ಇದಕ್ಕೆ ಅನುಮತಿ ನೀಡಬೇಕು.

**ಪ್ರಾದೇಶಿಕ ಕ್ಷಿಪ್ರ ರೈಲು ಸಾರಿಗೆ ವ್ಯವಸ್ಥೆ ಜಾರಿಗೆ ಅನುಮತಿ**

ಬೆಂಗಳೂರು- ಮೈಸೂರು, ಬೆಂಗಳೂರು- ಕನಕಪುರ, ಬೆಂಗಳೂರು- ತುಮಕೂರು, ಬೆಂಗಳೂರು- ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು- ಕೋಲಾರ ನಡುವೆ ಪ್ರಾದೇಶಿಕ ಕ್ಷಿಪ್ರ ರೈಲು ಸಾರಿಗೆ ವ್ಯವಸ್ಥೆ ಜಾರಿಗೆ ಅನುಮತಿ ನೀಡಬೇಕು.

---

# ಜೂ.13 ರಂದು ಪದವಿ ಪ್ರದಾನ

• ಪ್ರಜೋದಯ ವರದಿ

**ಹಾಸನ:** ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸಹಯೋಗದಲ್ಲಿ ಜೂ 13 ರಂದು ಹಿಮ್ಸ್ ಕಾಲೇಜಿನ ಸಭಾಂಗಣದಲ್ಲಿ ಪದವಿ ಪ್ರದಾನ ಕಾರ್ಯಕ್ರಮ ಆಯೋಜಿಸಲಾಗಿದೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಉಪಕುಲಪತಿ ಡಾ|| ಭಗವಾನ್, ಐ.ಎನ್.ಎಸ್.ಎ ನೈಸರ್ಗಿಕ ವಿಜ್ಞಾನ ಮತ್ತು ಎಂಜಿನಿಯರಿಂಗ್ ಶಾಲೆಯ ಸಹಾಯಕ ಪ್ರಾಧ್ಯಾಪಕ ಮತ್ತು ಹಿರಿಯ ವಿಜ್ಞಾನಿ ಪ್ರೊ. ಎಂ.ಕೆ. ಸೂರಪ್ಪ, ಹಿಮ್ಸ್ ಕಾಲೇಜಿನ ಡೀನ್ ಮತ್ತು ನಿರ್ದೇಶಕ ಡಾ|| ರಾಜಣ್ಣ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

---

# ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ-ಕರ್ತವ್ಯ

## ವಿಶ್ವಪರಿಸರ ದಿನಾಚರಣೆ ಅಂಗವಾಗಿ ಶಾಂತಿಗ್ರಾಮದಲ್ಲಿ 500 ವಿವಿಧ ಜಾತಿ ಗಿಡಗಳ ನೆಡುವಿಕೆ

• ಪ್ರಜೋದಯ ವರದಿ

**ಶಾಂತಿಗ್ರಾಮ:** ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದ್ದು, ಭವಿಷ್ಯದ ಪೀಳಿಗೆಗೆ ಸ್ವಚ್ಛ ಮತ್ತು ಹಸಿರು ಪರಿಸರವನ್ನು ಉಳಿಸಿಕೊಡುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ವೃಕ್ಷಾರೋಪಣೆ ಹಾಗೂ ಗಿಡಗಳ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹಾಸನ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಶುಭಂ ಶುಕ್ಲ ಅವರು ಕರೆ ನೀಡಿದರು.

ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್), ಶಾಂತಿಗ್ರಾಮ ಹಾಗೂ ಶಾಂತಿಗ್ರಾಮ ಗ್ರಾಮ ಪಂಚಾಯಿತಿ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಪರಿಸರ ಮಾಲಿನ್ಯ, ಅರಣ್ಯ ನಾಶ ಹಾಗೂ ಹವಾಮಾನ ವೈಪರೀತ್ಯಗಳು ಮಾನವ ಸಮಾಜಕ್ಕೆ ಗಂಭೀರ ಸವಾಲಾಗಿ ಪರಿಣಮಿಸುತ್ತಿವೆ. ಈ ಹಿನ್ನೆಲೆಯಲ್ಲಿ ಗಿಡ-ಮರಗಳ ನೆಡುವಿಕೆ ಮತ್ತು ಅವುಗಳ ಪೋಷಣೆಗೆ ಎಲ್ಲರೂ ಕೈಜೋಡಿಸಬೇಕೆಂದು ತಿಳಿಸಿದರು.



ಕಾರ್ಯಕ್ರಮದ ಅಂಗವಾಗಿ ಕರ್ನಾಟಕ ಪಬ್ಲಿಕ್ ಸ್ಕೂಲ್ ಆವರಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುಮಾರು 500 ವಿವಿಧ ಜಾತಿಯ ಗಿಡಗಳನ್ನು ನೆಡಲಾಯಿತು. ವಿದ್ಯಾರ್ಥಿಗಳು, ಶಿಕ್ಷಕರು, ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಗ್ರಾಮಸ್ಥರು ಉತ್ಸಾಹದಿಂದ ದಿನಾಚರಣೆಯಲ್ಲಿ ಪಾಲ್ಗೊಂಡು ಪರಿಸರ ಸಂರಕ್ಷಣೆಯ ಕುರಿತು ಸಂಕಲ್ಪ ಕೈಗೊಂಡರು.

ಈ ಸಂದರ್ಭದಲ್ಲಿ ಶಾಂತಿಗ್ರಾಮ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ ಅಭಿಲಾಶ್ ಅವರು ಮಾತನಾಡಿ, ಪರಿಸರ ಸಂರಕ್ಷಣೆ ಒಂದು ದಿನದ ಆಚರಣೆಗೆ ಸೀಮಿತವಾಗದೆ ನಿರಂತರ ಚಟುವಟಿಕೆಯಾಗಬೇಕು ಎಂದು ಹೇಳಿದರು. ನೆಡಲಾದ ಪ್ರತಿಯೊಂದು ಗಿಡದ ಪಾಲನೆ ಮತ್ತು ಪೋಷಣೆಗೆ ಎಲ್ಲರೂ ಬದ್ಧತೆಯಿಂದ ಕಾರ್ಯ ನಿರ್ವಹಿಸಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ತನುಜ, ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ್, ಗ್ರಾಮ ಪಂಚಾಯಿತಿ ಸದಸ್ಯರು, ಶಿಕ್ಷಕ ವೃಂದ, ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾದ ಈ ಕಾರ್ಯಕ್ರಮವು ಪರಿಸರ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದು, ಶಾಲಾ ಆವರಣದಲ್ಲಿ ನೆಡಲಾದ ಗಿಡಗಳು ಮುಂದಿನ ದಿನಗಳಲ್ಲಿ ಹಸಿರು ವಾತಾವರಣ ನಿರ್ಮಾಣಕ್ಕೆ ಸಹಕಾರಿಯಾಗಲಿವೆ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

---

# ಹೆಚ್.ಐ.ವಿ.ಸೋಂಕಿತರಿಗೆ ಸವಲತ್ತು ಒದಗಿಸಿ

• ಪ್ರಜೋದಯ ವರದಿ

**ಹಾಸನ:** ಹೆಚ್.ಐ.ವಿ. ಸೋಂಕಿತರಿಗೆ ಅಂತ್ಯೋದಯ ಪಡಿತರ ಚೀಟಿ, ರಾಜೀವ್ ಗಾಂಧಿ ವಸತಿ ಯೋಜನೆಯಡಿ ಹಾಗೂ ಸರ್ಕಾರದಿಂದ ದೊರಕುವ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿ ಮಾತನಾಡಿದ ಅವರು, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿಗಳು ಸಭೆ ನಡೆಸಿ ಪರಿಣಾಮಕಾರಿಯಾಗಿ ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಕ್ರಮವಹಿಸಲು ನಿರ್ದೇಶನ ನೀಡಿದರು.

ಹೆಚ್.ಐ.ವಿ. ಬಾಧಿತ ಮತ್ತು ಸೋಂಕಿತ ಮಕ್ಕಳಿಗೆ ಪ್ರತಿ ತಿಂಗಳು 3000 ರೂಗಳನ್ನು 18 ವರ್ಷದವರೆಗೆ ನೀಡಲಾಗುವುದು ಎಂದು ಅವರು ತಿಳಿಸಿದರು.



ಪ್ರಾಯೋಜಕತ್ವ ಯೋಜನೆಯಡಿ ಸಿಂಗಲ್ ಪೇರೆಂಟ್ ಹಾಗೂ ತಂದೆ ತಾಯಿ ಇಲ್ಲದ ಅನಾಥ ಮಕ್ಕಳಿಗೆ ಪ್ರತಿ ಮಾಹೆ 4000 ರೂ. ಗಳನ್ನು 18 ವರ್ಷದವರೆಗೆ ನೀಡಲಾಗುವುದು ಎಂದ ಜಿಲ್ಲಾಧಿಕಾರಿ ಅವರು ಅಧಿಕಾರಿಗಳ ಬಳಿ ಸಹಾಯ ಕೇಳಿಕೊಂಡು ಬರುವ ಬಡಜನತೆಗೆ ಈ ರೀತಿಯ ಯೋಜನೆಗಳ ಮೂಲಕ ಸಹಾಯ ಮಾಡಿ ಎಂದು ತಿಳಿಸಿದರು.

---

# ಸಿ.ಇ.ಟಿ. ಪರೀಕ್ಷೆ: ಉತ್ತಮ ಸಾಧನೆ

• ಪ್ರಜೋದಯ ವರದಿ

**ಹಾಸನ:** ಸಿ.ಇ.ಟಿ. ಪರೀಕ್ಷೆಯಲ್ಲಿ ಚನ್ನರಾಯಪಟ್ಟಣ ಟೈಮ್ಸ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ಕೆ.ಎ.ದೀಕ್ಷಾ ಹಾಗೂ ಡಿ.ಎಂ. ಹರ್ಷಿತಾ ಅವರುಗಳು ಉತ್ತಮ ಸಾಧನೆ ಮಾಡಿದ್ದಾರೆ ಎಂದು ಟೈಮ್ಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಬಿ.ಕೆ.ಗಂಗಾಧರ್ ಅವರು ತಿಳಿಸಿದ್ದಾರೆ.

ಸಿ.ಇ.ಟಿ. ಪರೀಕ್ಷೆ ಫಲಿತಾಂಶದಲ್ಲಿ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿರುವ ದೀಕ್ಷಾ ಕೆ.ಎ. ಬಿ.ಪಿ.ಟಿ.ಯಲ್ಲಿ 310ನೇ ರ್‍ಯಾಂಕ್, ಎಂಜಿನಿಯರಿಂಗ್‌ನಲ್ಲಿ 3000ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ. ಹರ್ಷಿತಾ ಡಿ.ಎಂ. ಬಿ.ಎಸ್ಸಿ . ಅಗ್ರಿಯಲ್ಲಿ 1985, ಬಿ.ಎಸ್ಸಿ. ಎಜಿ.ಯಲ್ಲಿ 1033, ಬಿ.ಎಸ್ಸಿ ಫುಡ್ಸ್ಟನ್ಸ್ 1985 ಹಾಗೂ ಎಂಜಿನಿಯರಿಂಗ್‌ನಲ್ಲಿ 4894ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೆ ಪಠ್ಯದ ಜೊತೆ ಸಿ.ಇ.ಟಿ, ನೀಟ್ ಮತ್ತು ಜೆಇಇ ಕೋಚಿಂಗ್ ನೀಡಲಾಗುತ್ತಿದ್ದು, ಕಾಲೇಜಿನ ಉಪನ್ಯಾಸಕರೊಂದಿಗೆ ರಾಜ್ಯದ ನುರಿತ ಪರಿಣಿತ ಸಂಪನ್ಮೂಲ ವ್ಯಕ್ತಿಗಳಿಂದ ಕೋಚಿಂಗ್ ನೀಡಲಾಗುತ್ತಿದೆ. ಸುಸಜ್ಜಿತ ಪ್ರಯೋಗಾಲಯ ಸೇರಿದಂತೆ ಉತ್ತಮ ಸೌಲಭ್ಯಗಳು ಕಾಲೇಜಿನಲ್ಲಿದೆ. ತಾಲ್ಲೂಕು ಹಾಗೂ ಹಾಸನ ಜಿಲ್ಲೆಗೆ ನಮ್ಮ ಶಾಲೆ ಅತ್ಯುತ್ತಮ ಹೆಸರು ಗಳಿಸಿರುವುದು ಸಂತಸ ನೀಡಿದೆ ಎಂದು ಹೇಳಿದರು.





ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿ ಬಂದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುತ್ತಿರುವುದು ಶ್ಲಾಘನೀಯ. ಕಾಲೇಜಿನ ಪ್ರಾಂಶುಪಾಲ ಸುನೀಲ್ ಕುಮಾರ್ ಅವರ ನೇತೃತ್ವದಲ್ಲಿ ಗುಣಮಟ್ಟದ ಉಪನ್ಯಾಸಕರ ತಂಡ ಕಾಲೇಜಿನಲ್ಲಿ ಕಾರ್ಯ ನಿರ್ವಹಣೆ ಮಾಡುತ್ತಿರುವುದು ಈ ಎಲ್ಲಾ ಸಾಧನೆಗೆ ಕಾರಣವಾಗಿದೆ ಎಂದು ಅವರು ತಿಳಿಸಿದ್ದಾರೆ.

---

### ಆಲೂರು- ಕಟ್ಟಾಯ ಹೋಬಳಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ: ತಹಶೀಲ್ದಾರ್ ಸೂಚನೆ

# ವಿಶೇಷ ಮತಪಟ್ಟಿ ಪರಿಷ್ಕರಣೆ: ಬಿ.ಎಲ್.ಎ. ನೇಮಿಸಿ

• ಪ್ರಜೋದಯ ವರದಿ

**ಆಲೂರು:** ಬಿ.ಎಲ್.ಎ.ಗಳನ್ನು ನೇಮಕ ಮಾಡದೆ ಇರುವ ವಿವಿಧ ರಾಜಕೀಯ ಪಕ್ಷಗಳವರು ಅತಿ ತುರ್ತಾಗಿ ನೇಮಕ ಮಾಡಬೇಕು ಮತ್ತು ರಾಜಕೀಯ ಪಕ್ಷಗಳಿಂದ ನೇಮಕವಾದ ಮತಗಟ್ಟೆ ಏಜೆಂಟರುಗಳು ಕರಡು ಪ್ರಕಟಣೆಗೆ ಮೊದಲು ಪ್ರತಿ ದಿನಕ್ಕೆ 50 ರಂತೆ, ತದ ನಂತರ ಹಕ್ಕು ಮತ್ತು ಆಕ್ಷೇಪಣೆ ಅವಧಿಯಲ್ಲಿ ದಿನವೊಂದಕ್ಕೆ ಗರಿಷ್ಟ 10 ಅರ್ಜಿಗಳನ್ನು ಸಲ್ಲಿಸಬಹುದು ಎಂದು ತಹಶೀಲ್ದಾರ್ ಮಲ್ಲಿಕಾರ್ಜುನ ಅವರು ತಿಳಿಸಿದರು.

ಪಟ್ಟಣದ ವೀರಶೈವ ಕಲ್ಯಾಣ ಮಂಟಪದಲ್ಲಿ ತಾಲ್ಲೂಕು ಆಡಳಿತ ವತಿಯಿಂದ ಆಲೂರು ಮತ್ತು ಕಟ್ಟಾಯ ಹೋಬಳಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿ, ತಾಲ್ಲೂಕಿನ 95 ಮತಗಟ್ಟೆಗಳ ಹಂತದಲ್ಲಿ ಪರಿಷ್ಕರಣೆ ಕಾರ್ಯದಲ್ಲಿ ಮತದಾರರು ಸುಗಮವಾಗಿ ಭಾಗವಹಿಸಲು ಸಾಧ್ಯವಾಗುವಂತೆ ಬಿ.ಎಲ್.ಒ. ಫೆಸಿಲಿಟೇಷನ್ ಸೆಂಟರ್ ಹಾಗೂ ವೋಟರ್ ಫೆಸಿಲಿಟೇಷನ್ ಸೆಂಟರ್‌ಗಳನ್ನು, ಆಯಾ ಮತಗಟ್ಟೆ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಕಟ್ಟಡಗಳಲ್ಲಿ ಸ್ಥಾಪಿಸಲಾಗಿರುತ್ತದೆ. ಈ ಕೇಂದ್ರಗಳಲ್ಲಿ ಬಿ.ಎಲ್.ಒ. ಗಳು ಹಾಗು ಸಮಗ್ರ ಪರಿಷ್ಕರಣೆಗೆ ಅಗತ್ಯವಿರುವ ಎಲ್ಲಾ ಮಾಹಿತಿಗಳನ್ನು ಪಡೆಯಲು ಅವಕಾಶವಿದೆ.



ಜೂ.20 ರಿಂದ 29 ರವರೆಗೆ ಸಮಗ್ರ ಪರಿಷ್ಕರಣೆಯ ಪೂರ್ವ ಸಿದ್ಧತೆ ಹಾಗು ಮ್ಯಾಪಿಂಗ್ ಮಾಡಲಾದ ಮತದಾರರಿಗೆ, ಪ್ರಿಫಿಲ್ಲಡ್ ಎನ್ಯುಮರೇಷನ್ ಫಾರಂಗಳು ಹಾಗೂ ಮ್ಯಾಪಿಂಗ್ ಮಾಡದೆ ಇರುವ ಮತದಾರರ ಎನ್ಯುಮರೇಷನ್ ಫಾರಂಗಳನ್ನು ಮುದ್ರಿಸಿ ನೀಡಲಾಗುವುದು. ಬಿ.ಎಲ್.ಎ. ಗಳನ್ನು ನೇಮಕ ಮಾಡುವ ಸಂದರ್ಭದಲ್ಲಿ ಬಿ.ಎಲ್.ಎ-1 ಅನ್ನು ರಾಜ್ಯಾಧ್ಯಕ್ಷರು ವಿಧಾನ ಸಭಾ ಕ್ಷೇತ್ರಕ್ಕೆ ಒಬ್ಬರಂತೆ ನೇಮಕ ಮಾಡಬೇಕು. ಬಿ.ಎಲ್.ಎ.-2 ನಲ್ಲಿ ಮತಗಟ್ಟೆವಾರು ಬಿ.ಎಲ್.ಎ.ಗಳನ್ನು ನೇಮಕ ಮಾಡಿ ಜಿಲ್ಲಾಧಿಕಾರಿಗಳ ಕಚೇರಿಗೆ ಪ್ರತಿಯನ್ನು ನೀಡಬೇಕು. ಬಿ.ಎಲ್.ಎ. ಗಳು ಆಯಾ ಮತಗಟ್ಟೆಯ ಮತದರರಾಗಿರಬೇಕು. ನೇಮಕ ಮಾಡದೆ ಇರುವವರು ಅತಿ ತುರ್ತಾಗಿ ನೇಮಕ ಮಾಡಬೇಕು.

ವಿಶೇಷ ಸಮಗ್ರ ಪರಿಷ್ಕರಣೆ-2026 ರ ಸಂಬಂಧ, ಪ್ರಸ್ತುತ 2025 ರ ಮತದಾರರ ಪಟ್ಟಿಯಲ್ಲಿರುವ ಮತದಾರರನ್ನು 2002 ನೆ ಸಾಲಿನ ಮತದಾರರ ಪಟ್ಟಿಯೊಂದಿಗೆ ಮ್ಯಾಪಿಂಗ್ ಕಾರ್ಯವು ಚಾಲ್ತಿಯಲ್ಲಿದೆ. ಬಾಕಿ ಮತದಾರರನ್ನು ಪರಿಶೀಲಿಸಿ ಮ್ಯಾಪಿಂಗ್ ಮಾಡಲು ಬಿ.ಎಲ್.ಒ. ಗಳಿಗೆ ತಿಳಿಸಲಾಗಿದೆ. ಆಲೂರು ತಾಲೂಕಿನಲ್ಲಿ ಒಟ್ಟು 72060 ಮತದಾರರಿದ್ದು, 35.785 ಪುರುಷರು, 36.274 ಮಹಿಳೆಯರಿದ್ದಾರೆ. ಮತದಾರರ ಪಟ್ಟಿಯ ಮ್ಯಾಪಿಂಗ್ ಕಾರ್ಯ ಶೇ. 95.06 ರಷ್ಟು ಪೂರ್ಣಗೊಂಡಿದೆ. ಯಾವುದೇ ಮತಗಟ್ಟೆಯಲ್ಲಿ 1,200ಕ್ಕೂ ಹೆಚ್ಚು ಮತದಾರರಿದ್ದಲ್ಲಿ ಹೆಚ್ಚುವರಿ ಮತಗಟ್ಟೆಗಳನ್ನು ಸ್ಥಾಪಿಸುವ ಕುರಿತು ಪರಿಶೀಲನೆ ನಡೆಸಲಾಗುತಿದೆ. ಆಗಸ್ಟ್ 5 ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದರು.

ಜೂ. 30 ರಿಂದ ಜು. 29 ರವರೆಗೆ ಬಿ.ಎಲ್.ಒ.ಗಳು ಪ್ರತಿ ಮನೆಗಳಿಗೆ ಭೇಟಿ ನೀಡಿ ಮತದಾರರಿಗೆ ಫಾರ್ಮ್‌ಗಳನ್ನು ವಿತರಿಸಿ, ಭರ್ತಿ ಮಾಡಿದ ಅರ್ಜಿಗಳನ್ನು ಸಂಗ್ರಹಿಸಲಿದ್ದಾರೆ. ಮನೆಯಲ್ಲಿ ಯಾರೂ ಇಲ್ಲದಿದ್ದಲ್ಲಿ ಮೂರು ಬಾರಿ ಭೇಟಿ ನೀಡಿ ಮಾಹಿತಿ ಪಡೆಯಲಾಗುವುದು. ಸಂಪರ್ಕ ಸಾಧ್ಯವಾಗದಿದ್ದಲ್ಲಿ ನೋಟಿಸ್ ಅಂಟಿಸಿ ಮಾಹಿತಿ ನೀಡಲಾಗುವುದು. ಆ.5 ರಿಂದ ಸೆ.4 ರವರೆಗೆ ಹೆಸರು ಸೇರ್ಪಡೆ, ತಿದ್ದುಪಡಿ ಹಾಗೂ ಆಕ್ಷೇಪಣೆ ಸಲ್ಲಿಸಲು ಅವಕಾಶವಿದೆ. ಅರ್ಜಿಗಳ ವಿಚಾರಣೆಯನ್ನು ಅ.3 ರೊಳಗೆ ಪೂರ್ಣಗೊಳಿಸಿ ಅ.7 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು. ಆದ್ದರಿಂದ ಕ್ಷೇತ್ರದ ಮತದಾರರು ತಮ್ಮ ಮನೆಗಳಿಗೆ ಬರುವಂತಹ ಬಿ.ಎಲ್.ಒ.ಗಳಿಗೆ ಸರಿಯಾದ ಮಾಹಿತಿ ನೀಡಿ ಸಹಕರಿಸಬೇಕು. ಮಾಹಿತಿಗೆ 1950 ಕರೆ ಮಾಡಿ ಸಲಹೆ ಪಡೆಯಬಹುದು ಎಂದರು.

ತರಬೇತುದಾರರಾದ ಇರ್ಫಾನ್ ಪಾಷ, ಬಿ.ಗಿರೀಶ್, ಚುನಾವಣಾ ಶಾಖೆ ಶಿರಸ್ತೇದಾರ್ ಮಂಜುಳ ಮತ್ತು ಸಿಬ್ಬಂದಿ ಹಾಜರಿದ್ದರು.

# ಪಿಸಿಸಿ ಅಧ್ಯಕ್ಷರಿಗೆ ಎಐಸಿಸಿ ತುರ್ತು ಬುಲಾವ್

## ದೆಹಲಿಯಲ್ಲಿಂದು ಮಹತ್ವದ ಸಭೆ | ಕೇಂದ್ರದ ವಿರುದ್ಧ ಹೋರಾಟ ರೂಪಿಸಲು ಚರ್ಚೆ ಸಾಧ್ಯತೆ

• ಪ್ರಜೋದಯ ವರದಿ



**ಬೆಂಗಳೂರು:** ರಾಷ್ಟ್ರ ಮಟ್ಟದಲ್ಲಿ ನಡೆಯುತ್ತಿರುವ ಹಲವು ಬೆಳವಣಿಗೆಗಳ ಬೆನ್ನಲ್ಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಜೂ.11ರ ಗುರುವಾರ ತುರ್ತು ಸಭೆ ಕರೆದಿದ್ದಾರೆ.

ದೆಹಲಿಯ ಎಐಸಿಸಿ ಕಚೇರಿಯಲ್ಲಿ ಬೆಳಿಗ್ಗೆ 11.30ಕ್ಕೆ ಸಭೆ ಆರಂಭವಾಗಲಿದ್ದು, ಎಲ್ಲಾ ರಾಜ್ಯಗಳ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು (ಪಿಸಿಸಿ) ಭಾಗವಹಿಸಲಿದ್ದಾರೆ.

ಈ ಸಂಬಂಧ ಎಐಸಿಸಿ ತುರ್ತು ಸಂದೇಶ ನೀಡಿದೆ. ಸಭೆಗೆ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು, ಪ್ರದೇಶ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಿಗೆ ಸಂದೇಶ ರವಾನೆಯಾಗಿದೆ. ಎಐಸಿಸಿ ಅಧ್ಯಕ್ಷರಿಂದ ಸಭೆಯಲ್ಲಿ ಮಹತ್ವದ ವಿಷಯ ಪ್ರಸ್ತಾಪವಾಗುವ ಸಾಧ್ಯತೆಯಿದೆ.

**ಕೇಂದ್ರದ ವಿರುದ್ಧ ಸಿದ್ದರಾಮಯ್ಯ ಕಿಡಿ**

ಭಾರತದ ಪ್ರಜಾಪ್ರಭುತ್ವವನ್ನು ಹಾಳುಗೆಡವುವ ಮೂಲಕ ದೀರ್ಘಾವಧಿ ಪ್ರಧಾನಿಯಾಗಿ ಮುಂದುವರಿದಿರುವ ನರೇಂದ್ರ ಮೋದಿ ಅವರ ಸಾಧನೆಯ ಬಗ್ಗೆ ಬಿಜೆಪಿ ಸಂಭ್ರಮಿಸುತ್ತಿರುವುದು ಪ್ರಜಾಪ್ರಭುತ್ವದ ವಿರುದ್ಧದ ಅತಿದೊಡ್ಡ ಅಣಕವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಗ್ದಾಳಿ ನಡೆಸಿದ್ದಾರೆ.

ಮಧ್ಯಪ್ರದೇಶದಿಂದ ರಾಜ್ಯಸಭಾ ಅಭ್ಯರ್ಥಿಯಾಗಿ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದ ಮೀನಾಕ್ಷಿ ನಟರಾಜನ್ ಅವರ ನಾಮಪತ್ರವನ್ನು ಮೋದಿಯವರ ಕಪಿಮುಷ್ಟಿಯಲ್ಲಿರುವ ಚುನಾವಣಾ ಆಯೋಗ ತಿರಸ್ಕರಿಸಿರುವುದು ತಾಜಾ ನಿದರ್ಶನ. ಮೋದಿ ಆಡಳಿತದಲ್ಲಿ ದೇಶದ ಪ್ರಜಾ ಪ್ರಭುತ್ವದ ಪರಿಸ್ಥಿತಿ ಹೇಗಿದೆ ಎಂಬುದಕ್ಕೆ ಪೂರಕ ಉದಾಹರಣೆ ಇದಾಗಿದೆ. ಮೀನಾಕ್ಷಿ ನಟರಾಜನ್ ಅವರ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯಲ್ಲಿ ಯಾವುದೇ ಲೋಪದೋಷಗಳಿರಲಿಲ್ಲ. ಆದರೂ ಕೆಲವು ಲೋಪದೋಷಗಳನ್ನು ಸೃಷ್ಟಿ ಮಾಡಿ ತಿರಸ್ಕಾರ ಮಾಡಲಾಗಿದೆ. ಇದು ಸ್ಪಷ್ಟ ಚುನಾವಣಾ ಅಕ್ರಮ ಹಾಗು ರಾಜಕೀಯ ಷಡ್ಯಂತ್ರವೆಂದು ಅವರು ಹೇಳಿದ್ದಾರೆ.

ಈ ಷಡ್ಯಂತ್ರದ ಭಾಗವಾಗಿ ಮಧ್ಯಪ್ರದೇಶದಿಂದ ರಾಜ್ಯಸಭೆಗೆ ಕೇವಲ ಇಬ್ಬರು ಅಭ್ಯರ್ಥಿ ಗಳನ್ನಷ್ಟೇ ಗೆಲ್ಲಿಸಿಕೊಳ್ಳಬಹುದಾದ ಸಂಖ್ಯಾಬಲ ಹೊಂದಿದ್ದರೂ 3ನೇ ಅಭ್ಯರ್ಥಿಯನ್ನು ಬಿಜೆಪಿ ಕಣಕ್ಕಿಳಿಸಿತ್ತು. ದೊಡ್ಡ ಮೊತ್ತದ ಹಣದ ಆಮಿಷವನ್ನು ಒಡ್ಡುವ ಮೂಲಕ ಕುದುರೆ ವ್ಯಾಪಾರ ನಡೆಸಲು ತಯಾರಿ ನಡೆಸಿತ್ತು. ಕಾಂಗ್ರೆಸ್ ಶಾಸಕರನ್ನು ಖರೀದಿಸಿ 3ನೇ ಅಭ್ಯರ್ಥಿಯನ್ನು ಗೆಲ್ಲಿಸಿ ಕೊಳ್ಳುವ ಹುನ್ನಾರವನ್ನು ನಡೆಸಿತ್ತು. ಆದರೆ ಕಾಂಗ್ರೆಸ್ ಶಾಸಕರು ಒಗ್ಗಟ್ಟಾದರು, ಅದರಿಂದ ಬಿಜೆಪಿಯ ಕುದುರೆ ವ್ಯಾಪಾರ ನಡೆಯಲಿಲ್ಲ. ಹಾಗಾಗಿ ಕೊನೆಯ ಅಸ್ತ್ರ ಎಂಬಂತೆ ಚುನಾವಣಾ ಆಯೋಗದ ಮೂಲಕ ಅಭ್ಯರ್ಥಿಯ ನಾಮಪತ್ರವೇ ನೇರವಾಗಿ ತಿರಸ್ಕೃತಗೊಳ್ಳುವಂತೆ ಮಾಡಿದೆ ಎಂದಿದ್ದಾರೆ.

ಮೀನಾಕ್ಷಿ ನಟರಾಜನ್ ಅವರ ನಾಮಪತ್ರ ತಿರಸ್ಕಾರವು ಸಂಪೂರ್ಣವಾಗಿ ಕಾನೂನಿಗೆ ವಿರುದ್ಧವಾದ ನಡೆಯಾಗಿದೆ. ಕಾನೂನಿನ ಚೌಕಟ್ಟಿನಡಿ ಮೀನಾಕ್ಷಿ ನಟರಾಜನ್ ಅವರ ವಿರುದ್ಧ ಯಾವುದೇ ಅಪರಾಧ ಪ್ರಕರಣಗಳಿಲ್ಲ. ಒಂದು ಖಾಸಗಿ ದೂರು ಅಪರಾಧ ಪ್ರಕರಣವಾಗುವುದಿಲ್ಲ. ಪ್ರಸ್ತುತ ಅವರಿಗೆ ನ್ಯಾಯಾಲಯದಿಂದ ಶೋಕಾಸ್ ನೋಟಿಸ್ ಮಾತ್ರವೇ ಬಂದಿದ್ದು, ಅದನ್ನು ಅಫಿಡವಿಟ್‌ನಲ್ಲಿ ಸೇರಿಸುವ ಅಗತ್ಯವಿಲ್ಲ.

ಈ ಬಗ್ಗೆ ಚುನಾವಣಾ ಆಯೋಗದ ಸೂಚನೆಗಳೇ ಸ್ಪಷ್ಟವಾಗಿ ಹೇಳಿದ್ದರೂ ಮೀನಾಕ್ಷಿ ಅವರ ನಾಮಪತ್ರವನ್ನು ತಿರಸ್ಕಾರ ಮಾಡಲಾಗಿದೆ. ಈ ನಿರ್ಧಾರವು ಪಕ್ಷಪಾತವಾಗಿದ್ದು, ಆಯೋಗವು ಸ್ವತಂತ್ರವಾಗಿ ತೆಗೆದುಕೊಂಡ ನಿರ್ಧಾರವಾಗಿಲ್ಲ. ಚುನಾವಣೆಯನ್ನು ನ್ಯಾಯಯುತವಾಗಿ ಗೆಲ್ಲಲು ಸಾಧ್ಯವಿಲ್ಲದ ಬಿಜೆಪಿಗೆ ಪರೋಕ್ಷವಾಗಿ ಗೆಲ್ಲಲು ಚುನಾವಣಾ ಆಯೋಗವು ನೀಡು ತ್ತಿರುವ ಸಹಕಾರವಾಗಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಲೋಕಸಭೆಯಲ್ಲಿ ಕೃತಕ ಸಂಖ್ಯೆಗಳನ್ನು ಸೃಷ್ಟಿಸುವ ಮೂಲಕ ತನ್ನ ಪ್ರಜಾಪ್ರಭುತ್ವ ವಿರೋಧಿ ಮತ್ತು ಸಂವಿಧಾನ ವಿರೋಧಿ ಮಸೂದೆಗಳನ್ನು ಯಾವುದೇ ಪ್ರತಿರೋಧವಿಲ್ಲದೆ ಸಾರಾಸಗಟಾಗಿ ಜಾರಿಗೊಳಿಸಲು ಅಗತ್ಯ ಬಲವನ್ನು ಹೆಚ್ಚಿಸಿಕೊಳ್ಳುವುದು ಬಿಜೆಪಿಯ ಸ್ಪಷ್ಟ ಗುರಿಯಾಗಿದೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲಿನ ದಾಳಿಯನ್ನು ನಮ್ಮ ಪಕ್ಷವು ಬಲವಾಗಿ ವಿರೋಧಿ ಸುತ್ತದೆ. ನಾವು ದೇಶದ ನಾಗರಿಕರ ಪರವಾಗಿ ನಿಂತು, ಪ್ರತಿಯೊಂದು ಅನ್ಯಾಯದ ವಿರುದ್ಧ ಹೋರಾಡುತ್ತೇವೆಂದು ಎಚ್ಚರಿಕೆ ನೀಡಿದ್ದಾರೆ.

## ಜಮೀರ್ ಅಹಮ್ಮದ್‌ಗೆ ಸಚಿವ ಸ್ಥಾನ ನೀಡುವಂತೆ ಆಗ್ರಹ

» ಮೊದಲನೇ ಪುಟದಿಂದ

ಅವಧಿಯಲ್ಲಿ ವಸತಿ ಸಚಿವರಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ. ಕೇವಲ ಮುಸ್ಲಿಂ ನಾಯಕರಲ್ಲದೆ ಸರ್ವ ಸಮುದಾಯಗಳ ಪ್ರೀತಿಗೆ ಪಾತ್ರರಾಗಿದ್ದಾರೆ. ಜಮೀರ್ ಅವರ ಸಂಘಟನಾ ಶಕ್ತಿಯ ಅರಿವಿದ್ದರಿಂದಲೇ ಕೇರಳ ಚುನಾವಣೆಯಲ್ಲಿ ಪ್ರಚಾರಕ್ಕೆ ಕರೆಸಿಕೊಳ್ಳಲಾಗಿತ್ತು. ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲೂ ಅವರು ಪ್ರಚಾರ ನಡೆಸಿದ್ದರಿಂದ ಕೈ ಅಭ್ಯರ್ಥಿ ಸಮರ್ಥ್ ಶಾಮನೂರು ಗೆದ್ದಿದ್ದಾರೆ. ಈ ಎಲ್ಲಾ ಸತ್ಯ ಹೈಕಮಾಂಡ್ ನಾಯಕರಿಗೆ ಗೊತ್ತಿದೆ. ಆದರೆ ಯಾರದೋ ಕಪಿಮುಷ್ಟಿಗೆ ಸಿಲುಕಿ ದ್ವೇಷ ಸಾಧಿಸಲಾಗುತ್ತಿದೆ. ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ಜಮೀರ್ ಅಹಮ್ಮದ್ ಅವರಿಗೆ ಸ್ಥಾನಮಾನ ನೀಡದಿದ್ದರೆ ಮುಸ್ಲಿಂ ಸಮುದಾಯ ಕಾಂಗ್ರೆಸ್‌ನಿಂದ ಅಂತರ ಕಾಯ್ದುಕೊಳ್ಳಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅಲ್ಪಸಂಖ್ಯಾತ ಮುಸ್ಲಿಂ ಸ್ವಾಭಿಮಾನಿ ವೇದಿಕೆ ಸದಸ್ಯ ವಸೀಂ ಖಾನ್, ಮೊಹಮ್ಮದ್ ಶರ್ಫುದ್ದೀನ್ ಇತರರು ಇದ್ದರು.

# ರಾಜಕಾಲುವೆ ಮೇಲೆ ಬಡಾವಣೆ ನಿರ್ಮಾಣ ಆರೋಪ

• ಪ್ರಜೋದಯ ವರದಿ



**ಹಾಸನ:** ತಾಲ್ಲೂಕಿನ ತೇಜೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಾಸನಾಂಬೆ ಬಡಾವಣೆ ನಿರ್ಮಾಣ ವೇಳೆ ರಾಜಕಾಲುವೆಯನ್ನು ಮುಚ್ಚಿಹಾಕಿ, ಇದೀಗ ಮಳೆ ನೀರು ಹರಿಯಲು ಜಾಗವಿಲ್ಲದೆ ಬೇರೆಯವರ ಜಮೀನಿನಲ್ಲಿ ನೀರು ಕಾಲುವೆ ನಿರ್ಮಾಣಕ್ಕೆ ತಹಶೀಲ್ದಾರ್ ಮುಂದಾಗಿದ್ದಾರೆಂದು ಸ್ಥಳೀಯ ಭೂಮಾಲೀಕರು ಆರೋಪಿಸಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ದೂರುದಾರರ ಪರ ವಕೀಲ ಅಭಿಷೇಕ್ ಅವರು ಮಾತನಾಡಿ, ಹಳೇಬೀಡು ರಸ್ತೆಗೆ ಹೊಂದಿಕೊಂಡಿರುವ 60-70 ಎಕರೆ ಪ್ರದೇಶದಲ್ಲಿ ಹಾಸನಾಂಬ ಬಡಾವಣೆ ನಿರ್ಮಿಸಲಾಗಿದೆ. ಈ ವೇಳೆ ಮೊದಲು ಇದ್ದ ರಾಜ ಕಾಲುವೆಯನ್ನು ಮುಚ್ಚಲಾಗಿದೆ. ಇದರಿಂದ ನೀರು ಹರಿಯದೆ ಅಲ್ಲೇ ನಿಂತು, ಹೊಸ ಮನೆ ಕಟ್ಟಿರುವ, ಕಟ್ಟಲು ಉದ್ದೇಶಿಸಿರುವ ನಿವಾಸಿಗಳಿಗೆ ತೀವ್ರ ತೊಂದರೆಯಾಗಿದೆ ಎಂದು ದೂರಿದರು.

ಹಾಸನಾಂಬ ಬಡಾವಣೆಯಲ್ಲಿ ಒತ್ತುವರಿಯಾಗಿರುವ ಜಾಗವನ್ನು ತೆರವುಗೊಳಿಸಿ ಕಾನೂನು ರೀತಿ ಕ್ರಮ ಕೈಗೊಳ್ಳುವಂತೆ ಶಾಸಕ ಹೆಚ್.ಪಿ. ಸ್ವರೂಪ್ ಅವರು ಮೇ 26 ರಂದು ತಹಶೀಲ್ದಾರ್ ಅವರಿಗೆ ಪತ್ರ ಬರೆದಿದ್ದಾರೆ. ಹೊಸ ಬಡಾವಣೆಯಲ್ಲಿ ರಾಜ ಕಾಲುವೆ, ನೀರು ಕಾಲುವೆ, ಎಲ್ಲಾ ತರಹದ ಖರಾಬು ಜಮೀನುಗಳನ್ನು ಅಳತೆ ಮಾಡಿ ಒತ್ತುವರಿಯನ್ನು ತೆರವುಗೊಳಿಸುವಂತೆ ಹಲವು ದೂರುಗಳು ಸ್ವೀಕೃತಗೊಂಡಿವೆ. ಕೂಡಲೇ ಸ್ಥಳ ಪರಿಶೀಲನೆ ನಡೆಸಿ, ಸಾರ್ವಜನಿಕರ, ರೈತರ ಹಾಗು ಸರ್ಕಾರಿ ಜಾಗ ಉಳಿಸುವಂತೆ ಸೂಚಿಸಿದ್ದಾರೆಂದು ತಿಳಿಸಿದರು.

ಶಾಸಕರು ಹಾಗು ಸ್ಥಳೀಯರ ದೂರಿನಂತೆ ಕ್ರಮ ಕೈಗೊಳ್ಳಬೇಕಿದ್ದ ತಹಶೀಲ್ದಾರ್ ಅವರು ದೊಡ್ಡಕೊಂಡಗೊಳದ ಸ.ನಂ.129/1, 2, 135/3 ಮತ್ತು 4, 137/1 ಮತ್ತು 3 ಹೀಗೆ 13 ಸ.ನಂ.ವ್ಯಾಪ್ತಿಯಲ್ಲಿ ದೇವರಾಜ್ ಎಂಬುವವರು ಖರೀದಿ ಮಾಡಿರುವ 3.37 ಎಕರೆ ಜಾಗದಲ್ಲಿ ಕಾಲುವೆ ತೋಡುವುದಾಗಿ ತಹಶೀಲ್ದಾರ್ ಕಿರುಕುಳ ನೀಡುತ್ತಿದ್ದಾರೆ. ಪ್ರಕರಣ ದಾಖಲಿಸುವ ಬೆದರಿಕೆ ಹಾಕುತ್ತಿದ್ದಾರೆಂದು ದೂರಿದರು.

ಬಡಾವಣೆ ನಿರ್ಮಿಸಿರುವವರು ಮಾಡಿರುವ ತಪ್ಪಿಗೆ ದೇವರಾಜು, ಅವರ ಪುತ್ರ ಅರ್ಜುನ್‌ಗೆ ತೊಂದರೆ ಕೊಡುತ್ತಿದ್ದಾರೆ. ಈ ಸಂಬಂಧ ಯಾವುದೇ ನೋಟೀಸ್ ನೀಡಿಲ್ಲ, ಸರ್ವೆ ಕೂಡ ಮಾಡಿಲ್ಲ. ರಾಜಕೀಯ ಒತ್ತಡಕ್ಕೆ ಮಣಿದು ಹೀಗೆ ಮಾಡುತ್ತಿದ್ದಾರೆ. 3.37 ಎಕರೆಯಲ್ಲಿ ಎಲ್ಲೂ ಬಿ ಖರಾಬ್ ಇಲ್ಲ. ಆದರೂ ತಪ್ಪು ಮಾಡಿರುವವರನ್ನು ಬಿಟ್ಟು ನಮಗೆ ತೊಂದರೆ ಕೊಡುವುದನ್ನು ನಿಲ್ಲಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಅರ್ಜುನ್, ಬಿ.ಕೆ.ನಾಗೇಶ್, ಸುದರ್ಶನ್, ಮೋಹನ್ ಇದ್ದರು.

# ಅಂಕವಳ್ಳಿಯಲ್ಲಿ ಮತ್ತೆ ಎರಡು ಚಿರತೆ ಸಂಚಾರ



• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕಿನ ಅಂಕವಳ್ಳಿ ಗ್ರಾಮದಲ್ಲಿ ಮತ್ತೆ ಚಿರತೆಗಳ ಸಂಚಾರ ಕಂಡು ಬಂದಿದ್ದು, ಗ್ರಾಮಸ್ಥರಲ್ಲಿ ಆತಂಕ ಮತ್ತಷ್ಟು ಹೆಚ್ಚಾಗಿದೆ. ಗ್ರಾಮದ ಸಣ್ಣಸ್ವಾಮಿ ಅವರ ಮನೆಯ ಸಮೀಪ ಎರಡು ಚಿರತೆಗಳು ಕಾಣಿಸಿಕೊಂಡಿವೆ. ಅಲ್ಲದೇ ಗ್ರಾಮದ ಮೋಹನ್ ಎಂಬುವವರು ಸಾಕಿದ್ದ ನಾಯಿಯನ್ನು ಚಿರತೆಗಳು ಹೊತ್ತೊಯ್ದು ತಿಂದು ಹಾಕಿವೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಇದೇ ಗ್ರಾಮದಲ್ಲಿ ಕಳೆದ ಶುಕ್ರವಾರ ಹಾಡುಹಗಲೇ ಚಿರತೆಯೊಂದು ಐವರ ಮೇಲೆ ದಾಳಿ ನಡೆಸಿ ಆತಂಕ ಸೃಷ್ಟಿಸಿತ್ತು. ಘಟನೆಯ ಬಳಿಕ ಮನೆಯೊಂದರಲ್ಲಿ ಅಡಗಿದ್ದ ಹೆಣ್ಣು ಚಿರತೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿದಿದ್ದರು. ಇದೀಗ ಮತ್ತೆರಡು ಚಿರತೆಗಳು ಆಹಾರ ಅರಸಿ ಜನವಸತಿ ಪ್ರದೇಶಕ್ಕೆ ಬಂದಿರುವುದು ಗ್ರಾಮಸ್ಥರ ಆತಂಕಕ್ಕೆ ಕಾರಣವಾಗಿದೆ.

ಚಿರತೆಗಳ ಸಂಚಾರ ಕುರಿತು ಅರಣ್ಯ ಇಲಾಖೆಗೆ ಮಾಹಿತಿ ನೀಡಿದರೂ ಸಮರ್ಪಕ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪರಿಸ್ಥಿತಿ ಕೈಮೀರುವ ಮುನ್ನವೇ ಅರಣ್ಯ ಇಲಾಖೆ ತಕ್ಷಣ ಬೋನು ಅಳವಡಿಸಿ ಚಿರತೆಗಳನ್ನು ಸೆರೆಹಿಡಿಯಬೇಕು. ನಿರಂತರವಾಗಿ ಕಾಡುಪ್ರಾಣಿಗಳ ಸಂಚಾರ ಹೆಚ್ಚಾಗುತ್ತಿರುವ ಹಿನ್ನಲೆ ಅರಣ್ಯ ಇಲಾಖೆ ಸಿಬ್ಬಂದಿ ನಿಗಾ ವಹಿಸಿ, ಜನರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ಜೂ.13ಕ್ಕೆ ಚನ್ನರಾಯಪಟ್ಟಣದಲ್ಲಿ ಟಗರು ಕಾಳಗ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೆಚ್ಚು ದಿನ ಮುಖ್ಯಮಂತ್ರಿಯಾಗಿ ಕರ್ತವ್ಯ ಪೂರೈಸಿರುವ ಸವಿನೆನಪಿಗಾಗಿ ಪಟ್ಟಣದ ಸರ್ಕಾರಿ ಮಾಧ್ಯಮಿಕ ಶಾಲಾ ಆವರಣದಲ್ಲಿ ಜೂ.13 ರಂದು ರಾಜ್ಯಮಟ್ಟದ ಟಗರು ಕಾಳಗ ಏರ್ಪಡಿಸಲಾಗಿದೆ ಎಂದು ರಾಷ್ಟ್ರೀಯ ಅಹಿಂದ ಸಂಘಟನೆ ಜಿಲ್ಲಾಧ್ಯಕ್ಷ ಮಹೇಶ್ ಕಬ್ಬಾಳು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳೊಂದಿಗೆ ಜನಪರವಾದ ಕೆಲಸ ಮಾಡಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರ್ಯ ವೈಖರಿಗೆ ಈ ಕಾರ್ಯಕ್ರಮವು ಸಾಕ್ಷಿಯಾಗಲಿದೆ. ಅವರ ರಾಜಕೀಯ ಬದುಕು ಶ್ರೇಷ್ಟವಾದುದು ಎಂದರು.

ಪಂದ್ಯಾವಳಿಗೆ ದಾವಣಗೆರೆ, ಹರಿಹರ, ರಾಣೆಬೆನ್ನೂರು, ಚಿತ್ರದುರ್ಗ, ಭದ್ರಾವತಿ ಸೇರಿ ವಿವಿಧೆಡೆಯಿಂದ 350ಕ್ಕೂ ಹೆಚ್ಚು ಕಾಳಗದ ಟಗರು ಭಾಗವಹಿಸಲಿವೆ. 2, 4 ಹಾಗು 8 ಹಲ್ಲುಗಳ ಆಧಾರದ ಮೇಲೆ ಸ್ಪರ್ಧೆ ನಡೆಯಲಿದೆ. ಮೊದಲಿಗೆ 2 ಹಲ್ಲಿನ ಟಗರು, 2ನೇ ಹಂತದಲ್ಲಿ 8 ಹಲ್ಲಿನ ಟಗರು ಹಾಗು ಕೊನೆಯ ಹಂತವಾಗಿ 4 ಹಲ್ಲಿನ ಟಗರುಗಳ ಸ್ಪರ್ಧೆ ನಡೆಸಲಾಗುವುದು.

2 ಹಲ್ಲಿನ ಟಗರಿಗೆ ತಲಾ 1 ಸಾವಿರ ರೂ., 8 ಹಲ್ಲಿನ ಟಗರಿಗೆ 2,500 ರೂ. ಹಾಗು 4 ಹಲ್ಲಿನ ಟಗರಿಗೆ 1,500 ರೂ. ಪ್ರವೇಶ ಶುಲ್ಕ ನಿಗದಿಪಡಿಸಲಾಗಿದೆ ಎಂದರು.



ರಾಷ್ಟ್ರೀಯ ಅಹಿಂದ ಸಂಘಟನೆ ಜಿಲ್ಲಾ ಉಪಾಧ್ಯಕ್ಷ ಜಬಿವುಲ್ಲಾ ಬೇಗ್ ಅವರು ಮಾತನಾಡಿ, 2 ಹಲ್ಲಿನ ಕಾಳಗದಲ್ಲಿ ಪ್ರಥಮ ಬಹುಮಾನ 25 ಸಾವಿರ ರೂ., ದ್ವಿತೀಯ 15 ಸಾವಿರ ರೂ. ಹಾಗು ತೃತೀಯ ಬಹುಮಾನ 10 ಸಾವಿರ ರೂ., 8 ಹಲ್ಲಿನ ಕಾಳಗದಲ್ಲಿ ಪ್ರಥಮ ಬಹುಮಾನವಾಗಿ ಬೈಕ್, ದ್ವಿತೀಯ 40 ಸಾವಿರ ರೂ. ಮತ್ತು ತೃತೀಯ 25 ಸಾವಿರ ರೂ. ಹಾಗು 4 ಹಲ್ಲಿನ ಕಾಳಗದಲ್ಲಿ ಪ್ರಥಮ ಬಹುಮಾನವಾಗಿ ಎಲೆಕ್ಟ್ರಿಕ್ ಬೈಕ್, ದ್ವಿತೀಯ 25 ಸಾವಿರ ರೂ. ಹಾಗು ತೃತೀಯ ಸ್ಥಾನಕ್ಕೆ 15 ಸಾವಿರ ರೂ. ನೀಡಲಾಗುವುದೆಂದರು.

ಕಾರ್ಯಕ್ರಮವು ಜೂ.13 ರಂದು ಬೆಳಿಗ್ಗೆ 10.30ಕ್ಕೆ ಪ್ರಾರಂಭವಾಗಲಿದ್ದು, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಶ್ರೇಯಸ್ ಪಟೇಲ್, ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಸೇರಿ ವಿವಿಧ ಗಣ್ಯರು ಪಾಲ್ಗೊಳ್ಳಲಿದ್ದಾರೆಂದರು.

ರಾಷ್ಟ್ರೀಯ ಅಹಿಂದ ಸಂಘಟನೆಯ ಪದಾಧಿಕಾರಿಗಳಾದ ಆನ್ಸರ್ ಬೇಗ್, ಬಾಲು, ಹರೀಶ್ ಇತರರಿದ್ದರು.

# ಜೂ.14 ರಂದು ಪ್ರತಿಭಾ ಪುರಸ್ಕಾರ, ಸಾಮಾನ್ಯ ಸಭೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಸರ್ಕಾರಿ, ಅರೆ ಸರ್ಕಾರಿ ಹಾಗು ನಿಗಮ ಮಂಡಳಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ, ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಕೋ ಆಪರೇಟಿವ್ ಸೊಸೈಟಿ ಸದಸ್ಯರ ಮಕ್ಕಳಿಗೆ ಜೂ.14 ರಂದು ಪ್ರತಿಭಾ ಪುರಸ್ಕಾರ ಮತ್ತು ಸರ್ವ ಸದಸ್ಯರ ಸಾಮಾನ್ಯ ಸಭೆ ನಡೆಯಲಿದೆ ಎಂದು ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಕೆ.ಎಂ.ಶ್ರೀನಿವಾಸ್ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 10.30ಕ್ಕೆ ನಗರದ ಕಲಾಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮವನ್ನು ಆದಿಚುಂಚನಗಿರಿ ಹಾಸನ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಉದ್ಘಾಟಿಸುವರು. ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶುಭಂಶುಕ್ಲ ಭಾಗವಹಿಸುವರೆಂದು ಹೇಳಿದರು.

ಎಸ್‌ಎಸ್‌ಎಲ್‌ಸಿ-ಪಿಯುಸಿ ಹೆಚ್ಚು ಅಂಕ ಪಡೆದ 250 ಮಕ್ಕಳನ್ನು ಸನ್ಮಾನಿಸಲಾಗುವುದು. ಉತ್ತಮ ಸೇವೆ ಸಲ್ಲಿಸಿರುವ 15 ಮಂದಿ ಶಿಕ್ಷಕರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು. 2025ನೇ ಸಾಲಿನ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಜಿಲ್ಲೆಯ ಸಾಧಕರಿಗೆ, ರಾಜ್ಯಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ಪ್ರಶಸ್ತಿ ಗೆದ್ದು ಸಾಧನೆ ಮಾಡಿರುವ ನೌಕರರನ್ನೂ ಅಭಿನಂದಿಸಲಾಗುವುದೆಂದು ತಿಳಿಸಿದರು.

ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಂ.ಎನ್.ಪರಮೇಶ್, ಉಪಾಧ್ಯಕ್ಷರಾದ ಲೋಕೇಶ್ ಕುಮಾರ್, ಧರ್ಮ, ಗೌರವಾಧ್ಯಕ್ಷ ವಿಶ್ವನಾಥ್, ನಿರ್ದೇಶಕರಾದ ಸುರೇಶ್, ಶಿವೇಗೌಡ, ಭೈರಪ್ಪ ನಾಯಕ ಇದ್ದರು.




# ವಿದ್ಯುತ್ ಕಾರ್ಮಿಕರ ದಿನಾಚರಣೆ ಪ್ರಯುಕ್ತ ಜಾಥಾ



• ಪ್ರಜೋದಯ ವರದಿ

**ಹಾಸನ:** ವಿದ್ಯುತ್ ಕಾರ್ಮಿಕರ ದಿನಾಚರಣೆ ಅಂಗವಾಗಿ ಜಿಲ್ಲಾ ವಿದ್ಯುತ್ ಕಾರ್ಮಿಕರ ಸಂಘದ ವತಿಯಿಂದ ಬುಧವಾರ ನಗರದಲ್ಲಿ ಬೈಕ್ ಜಾಥಾ ನಡೆಸಲಾಯಿತು.

ನಗರದ ಹೇಮಾವತಿ ಪ್ರತಿಮೆ ಬಳಿ ಕಾರ್ಮಿಕ ನಿರೀಕ್ಷಕ ಆನಂದ್ ರಾಮ್ ಅವರು ಕೇಕ್ ಕತ್ತರಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಕಾರ್ಮಿಕರಿಗೆ ಕೋರಿದರು. ಈ ವೇಳೆ ಸಂಘದ ಸದಸ್ಯರು ಕೇಕ್ ಕತ್ತರಿಸುವ ಮೂಲಕ ಸಂಭ್ರಮಾಚರಣೆ ನಡೆಸಿದರು.

ನಂತರ ಮಾತನಾಡಿದ ಆನಂದ್ ರಾಮ್ ಅವರು, ಕಾರ್ಮಿಕರು ಸಂಘಟಿತರಾಗಿ ನಮ್ಮ ಇಲಾಖೆಯಿಂದ ಸಿಗುವ ಸೌಲಭ್ಯ ಪಡೆದುಕೊಳ್ಳುವಂತಾಗಬೇಕು. ಅಸಂಘಟಿತ ಕಾರ್ಮಿಕರು ನಮ್ಮ ಇಲಾಖೆಯಿಂದ ಇ-ಶ್ರಮ್ ಕಾರ್ಡ್ ಮಾಡಿಸಿದರೆ ಅವರಿಗೆ ಸೌಲಭ್ಯ ಸಿಗುತ್ತದೆ. ಇ.ಎಸ್.ಐ. ಪಿಎಫ್ ಎಲ್ಲಾ ಸೌಲಭ್ಯ ಸರ್ಕಾರದಿಂದ ಸಿಗಲಿವೆ ಎಂದರು.

ಕಾರ್ಮಿಕ ಮುಖಂಡ ಹೆಚ್.ಟಿ. ರಾಮೇಗೌಡ ಮಾತನಾಡಿ, ವಿದ್ಯುತ್ ಕೆಲಸಗಾರರ ಪ್ರತಿನಿಧಿಗಳು, ಮನೆ, ವಾಣಿಜ್ಯಕಟ್ಟಡ, ಕಚೇರಿ, ಕೈಗಾರಿಕೆ, ಅಣೆಕಟ್ಟೆ ಹಾಗು ವಿವಿಧ ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗ ಳಲ್ಲಿ ಕಾಮಗಾರಿ ಮಾಡುತ್ತಾರೆ. ಅಪಾಯಕಾರಿ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದರೂ ಅವರಿಗೆ ಅಗತ್ಯವಾದ ಸಾಮಾಜಿಕ ಭದ್ರತೆ ಹಾಗೂ ಸರ್ಕಾರಿ ಸೌಲಭ್ಯಗಳು ಸಮರ್ಪಕವಾಗಿ ದೊರೆಯುತ್ತಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಬಳಿಕ ಹೇಮಾವತಿ ಪ್ರತಿಮೆ ಬಳಿಯಿಂದ ಬೃಹತ್ ಬೈಕ್ ಜಾಥಾ ಹೊರಟು ಎನ್.ಆರ್.ವೃತ್ತ, ಡೇರಿ ವೃತ್ತ, ರಿಂಗ್ ರಸ್ತೆ, ಸುಬೇದಾರ್ ನಾಗೇಶ್ ವೃತ್ತದಲ್ಲಿ ಸಾಗಿ ಮಹಾವೀರ ವೃತ್ತದ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿ ಮನವಿ ಸಲ್ಲಿಸಿದರು.

ವಿದ್ಯುತ್ ಕಾರ್ಮಿಕರ ಸಂಘದ ಅಧ್ಯಕ್ಷ ಆನಂದ್, ಉಪಾಧ್ಯಕ್ಷ ಬಾಲಸುಬ್ರಹ್ಮಣ್ಯ, ಪ್ರಧಾನ ಕಾರ್ಯದರ್ಶಿ ಬಾಬು, ಖಜಾಂಚಿ ಮೊಹಮದ್ ಉಸ್ಮಾನ್ ಮತ್ತಿತರರು ಇದ್ದರು.


## ಅಪಘಾತ: ಯುವಕ ಸಾವು

• ಪ್ರಜೋದಯ ವರದಿ

**ಹಾಸನ:** ನಿಯಂತ್ರಣ ತಪ್ಪಿ ಬೈಕ್‌ನಿಂದ ಬಿದ್ದ ಯುವಕ ಮೃತಪಟ್ಟಿರುವ ಘಟನೆ ತಾಲ್ಲೂಕಿನ ವರ್ತಿಕೆರೆ ಗಡಿ ಸಮೀಪ ನಡೆದಿದೆ.

ಸಾಲಗಾಮೆ ಹೋಬಳಿ ಮಾರನಹಳ್ಳಿ ಗ್ರಾಮದ ಅರುಣ್‌ಕುಮಾರ್ (30) ಮೃತರು. ಜುಲೈ 8ರ ರಾತ್ರಿ 8.30ರ ಸಮಯದಲ್ಲಿ ವರ್ತಿಕೆರೆ ಗಡಿ ಬಾರ್‌ನಲ್ಲಿ ಮದ್ಯಪಾನ ಮಾಡಿ ಬೈಕ್‌ನಲ್ಲಿ ಹೋಗುತ್ತಿದ್ದಾಗ ರಸ್ತೆಯ ಎಡಬದಿಗೆ ಬಿದ್ದಿದ್ದಾರೆ. ಗಂಭೀರ ಗಾಯಗೊಂಡಿದ್ದ ಅವರನ್ನು ಸಾರ್ವಜನಿಕರು ಆಸ್ಪತ್ರೆಗೆ ದಾಖಲಿಸಿದರು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಫಿಫಾ ವಿಶ್ವಕಪ್ ಇಂದಿನಿಂದ ಆರಂಭ




• ಪ್ರಜೋದಯ ವರದಿ

**ನವದೆಹಲಿ:** ಫುಟ್‌ಬಾಲ್ ಪ್ರೇಮಿಗಳು ಕಾತುರದಿಂದ ಕಾಯುತ್ತಿರುವ ಫಿಫಾ ವಿಶ್ವಕಪ್- 2026 ಜೂನ್ 11 ರಿಂದ ಆರಂಭವಾಗುತ್ತಿದೆ. ಇದೇ ಮೊದಲ ಬಾರಿಗೆ ಅಮೇರಿಕಾ, ಮೆಕ್ಸಿಕೊ ಮತ್ತು ಕೆನಡಾ ದೇಶಗಳು ಜಂಟಿಯಾಗಿ ಈ ಮಹಾಸಮರವನ್ನು ಆಯೋಜಿಸುತ್ತಿದ್ದು, ಒಟ್ಟು 48 ತಂಡಗಳು ಕಣಕ್ಕಿಳಿಯುತ್ತಿವೆ.

2026ರ ಫಿಫಾ ಪುರುಷರ ವಿಶ್ವಕಪ್ ಆವೃತ್ತಿಯು ಜೂನ್ 11ರಿಂದ ಜುಲೈ 19ರವರೆಗೆ (ಭಾರತೀಯ ಕಾಲಮಾನದಲ್ಲಿ ಜೂನ್ 12ರಿಂದ ಜುಲೈ 20) ಅಮೇರಿಕಾ, ಮೆಕ್ಸಿಕೊ ಮತ್ತು ಕೆನಾಡದ 16 ಬೇರೆ ಬೇರೆ ಸ್ಥಳಗಳಲ್ಲಿ ನಡೆಯಲಿದೆ. ಒಟ್ಟು 48 ತಂಡಗಳು ಈ ವರ್ಷದ ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿದ್ದು, ಫೈನಲ್ ಸೇರಿ ಒಟ್ಟು 104 ಪಂದ್ಯಗಳು ನಡೆಯಲಿವೆ.

ಈ ಬಾರಿಯ ವಿಶ್ವಕಪ್, ಫಿಫಾ ಇತಿಹಾಸದಲ್ಲಿಯೇ ಅತೀ ದೊಡ್ಡ ಟೂರ್ನಿಯಾಗಿದೆ. ಈ ಬೃಹತ್ ಟೂರ್ನಮೆಂಟ್‌ನಲ್ಲಿ 1,000ಕ್ಕೂ ಅಧಿಕ ಆಟಗಾರರು ಭಾಗವಹಿಸುವ ನಿರೀಕ್ಷೆ ಇದೆ.

# ಚ.ರಾ.ಪಟ್ಟಣದಲ್ಲಿ ಇಂದು ರಾಷ್ಟ್ರೀಯ ಲೋಕ ಅದಾಲತ್

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಇಲ್ಲಿಯ ನ್ಯಾಯಾಲಯಗಳಲ್ಲಿ ಜುಲೈ 11 ರಂದು ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ 4 ನೇ ಅಧಿಕ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಎಸ್. ಕಲ್ಪನಾ ಅವರು ಹೇಳಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಆಯೋಜಿಸಲಾಗಿದ್ದ ಕಾನೂನು ಅರಿವು ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೀರ್ಘ ಕಾಲದಿಂದ ಬಾಕಿ ಉಳಿದಿರುವ ಪ್ರಕರಣಗಳನ್ನು ಶೀಘ್ರವಾಗಿ ಮತ್ತು ಸೌಹಾರ್ದಯುತವಾಗಿ ಇತ್ಯರ್ಥ ಪಡಿಸಿಕೊಳ್ಳಲು ರಾಷ್ಟ್ರೀಯ ಲೋಕ ಅದಾಲತ್ ಸಹಕಾರಿಯಾಗಿದೆ ಎಂದರು.

ಜನಸಾಮಾನ್ಯರ ಸಮಯ ಮತ್ತು ಹಣವನ್ನು ಉಳಿಸುವ ಉದ್ದೇಶದಿಂದ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದೆ. ಉಭಯ ಪಕ್ಷಗಾರರು ಒಪ್ಪಿಗೆ ಸೂಚಿಸಿದರೆ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಇದು ನೆರವಾಗಲಿದೆ. ಸಣ್ಣಪುಟ್ಟ ವ್ಯಾಜ್ಯಗಳಿಗಾಗಿ ನ್ಯಾಯಾಲಯಕ್ಕೆ ಅಲೆದಾಡುತ್ತಿರುವ ಕಕ್ಷಿದಾರರ ಮನವೊಲಿಸಿ ರಾಜಿ ಸಂಧಾನದ ಮೂಲಕ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳು ವಂತೆ ಕಕ್ಷಿದಾರರಿಗೆ ಸಲಹೆ ನೀಡಬೇಕೆಂದು ತಿಳಿಸಿದರು.



ಜುಲೈ 11 ರಂದು ನಡೆಯುವ ಅದಾಲತ್‌ಗೆ ಅವರನ್ನು ಕರೆತಂದು ಪ್ರಕರಣ ಇತ್ಯರ್ಥ ಪಡಿಸಿಕೊಳ್ಳುವಂತೆ ತಿಳಿಸಬೇಕು. ಲೋಕ್ ಅದಾಲತ್‌ನಲ್ಲಿ ರಾಜಿಯಾಗಬಲ್ಲ ಅಪರಾಧಿಕ ಪ್ರಕರಣಗಳು, ಬ್ಯಾಂಕ್ ಸಾಲ ವಸೂಲಾತಿ, ಕೈಗಾರಿಕಾ ಮತ್ತು ಕಾರ್ಮಿಕ ವೇತನ ವಿವಾದಗಳು, ಗ್ರಾಹಕ ವೇದಿಕೆ ಪ್ರಕರಣಗಳು, ರಿಯಲ್ ಎಸ್ಟೇಟ್, ಚೆಕ್ ಅಮಾನ್ಯ, ಮೋಟಾರು ವಾಹನ ಅಪಘಾತ ಪರಿಹಾರ, ವಿದ್ಯುತ್ ಹಾಗೂ ನೀರಿನ ಶುಲ್ಕ, ಭೂಸ್ವಾಧೀನ, ಪಿಂಚಣಿ, ವೇತನ ಭತ್ಯೆ ಸೇರಿ ವಿವಿಧ ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗುವುದೆಂದು ಮಾಹಿತಿ ನೀಡಿದರು.

ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಕಾರ್ಯದರ್ಶಿ ವಿ.ಕುಸುಮ ಅವರು ಮಾತನಾಡಿ, ತಾಲ್ಲೂಕಿನ 7 ನ್ಯಾಯಾಲಯಗಳಲ್ಲಿ ಸುಮಾರು 17,000 ಪ್ರಕರಣಗಳು ಬಾಕಿ ಇವೆ. ಅವುಗಳ ಪೈಕಿ ರಾಜಿಯಾಗಬಹುದಾದ ಎಲ್ಲಾ ಪ್ರಕರಣಗಳನ್ನು ಅದಾಲತ್‌ನಲ್ಲಿ ರಾಜಿ ಪ್ರಕರಣಗಳನ್ನಾಗಿ ಪರಿಗಣಿಸಿ ಕೈಗೆತ್ತಿಕೊಳ್ಳಲಾಗುತ್ತದೆ. ಕಕ್ಷಿದಾರರು ಮತ್ತು ವಕೀಲರು ಭಾಗವಹಿಸಲು ಅವಕಾಶ ಮಾಡಿಕೊಡಲಾಗಿದೆ. ಎಲ್ಲರಿಗೂ ನ್ಯಾಯ ದೊರಕಿಸಿ ಕೊಡುವ ಉದ್ದೇಶದಿಂದ ಲೋಕ ಅದಾಲತ್‌ಗೆ ಚಾಲನೆ ನೀಡಲಾಗಿದೆ ಎಂದರು.

ಕರ್ನಾಟಕ ಸರ್ಕಾರವು ಬಾಕಿ ಇರುವ ಸಂಚಾರ ದಂಡದ ಮೊತ್ತದ ಮೇಲೆ ಶೇ.50 ರಷ್ಟು ವಿನಾಯಿತಿ ಘೋಷಿಸಿದೆ. ಮೇ 2026ರೊಳಗೆ ದಾಖಲಾದ ಪೊಲೀಸ್ ಇ-ಚಲನ್ ಹಾಗೂ 1991ರಿಂದ 2022ರ ಅವಧಿಯ ಸಾರಿಗೆ ಇಲಾಖೆಯ ದಂಡಗಳನ್ನು ಹೊಂದಿರುವ ವಾಹನ ಸವಾರರು, ಜೂನ್ 21 ರಿಂದ ಜುಲೈ 10, 2026 ರೊಳಗಾಗಿ ಅರ್ಧ ಮೊತ್ತವನ್ನು ಪಾವತಿಸಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದೆಂದು ಸಲಹೆ ನೀಡಿದರು.

ವಿವರಗಳನ್ನು ಪರಿಶೀಲಿಸಲು ಮತ್ತು ಹಣ ಪಾವತಿ ಮಾಡಲು ಕರ್ನಾಟಕ ಸ್ಟೇಟ್ ಪೊಲೀಸ್ (ಕೆಎಸ್‌ಪಿ) ಆ್ಯಪ್, ಬಿಟಿಪಿ-ಅಸ್ತಂ ಆ್ಯಪ್, ಹತ್ತಿರದ ಸಂಚಾರ ಪೊಲೀಸ್ ಠಾಣೆಗಳು, ಸಂಚಾರ ನಿರ್ವಹಣಾ ಕೇಂದ್ರ ಮತ್ತು ಕರ್ನಾಟಕ ಒನ್/ಬೆಂಗಳೂರು ಒನ್ ವೆಬ್ ಸೈಟ್‌ಗಳಲ್ಲಿ ಪರಿಶೀಲಿಸಿ, ಪಾವತಿಸಬಹುದಾಗಿದೆ. ಸಾರ್ವಜನಿಕರು ಈ ಸುವರ್ಣ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದಯಾನಂದ್ ಶೆಟ್ಟಿಹಳ್ಳಿ, ಪ್ರಧಾನ ಕಾರ್ಯದರ್ಶಿ ಆರ್.ಶ್ರೀನಿವಾಸ್ ಉಳ್ಳಾವಳ್ಳಿ ಸೇರಿ ಸಂಘದ ಸದಸ್ಯರು ಭಾಗವಹಿಸಿದ್ದರು.

# ಅಂತರ್ಜಾತಿ ವಿವಾಹಿತರ ಪ್ರೋತ್ಸಾಹ ಧನಕ್ಕಾಗಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ದೌರ್ಜನ್ಯಕ್ಕೊಳಗಾದ ದಲಿತರಿಗೆ ಮತ್ತು ಅಂತರ್ಜಾತಿ ವಿವಾಹಿತರಿಗೆ ಬಾಕಿ ಇರುವ ಪರಿಹಾರ ಹಾಗು ಪ್ರೋತ್ಸಾಹ ಧನ ನೀಡಲು ಅನುದಾನವನ್ನು ಕೂಡಲೇ ಬಿಡುಗಡೆ ಮಾಡುವಂತೆ ಒತ್ತಾಯಿಸಿ ದಲಿತ ಹಕ್ಕುಗಳ ಸಮಿತಿಯಿಂದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಭಾರತದ ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಮಾನವ ಘನತೆಯನ್ನು ಖಚಿತಪಡಿಸಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲೆ ದೌರ್ಜನ್ಯ ಮುಂದುವರಿದಿರುವುದು ಆತಂಕಕಾರಿ ಸಂಗತಿ. ದೌರ್ಜನ್ಯಕ್ಕೊಳಗಾದ ದಲಿತ ಸಂತ್ರಸ್ತರಿಗೆ ನೀಡಬೇಕಾದ ಕಾನೂನುಬದ್ಧ ಪರಿಹಾರ ಧನ ಹಾಗು ಅಂತರ್ಜಾತಿ ವಿವಾಹಿತ ದಂಪತಿಗಳ ಪ್ರೋತ್ಸಾಹ ಧನ ವಿತರಣೆಯಲ್ಲಿ ರಾಜ್ಯ ಸರ್ಕಾರವು ತೋರುತ್ತಿರುವ ವಿಳಂಬ ಧೋರಣೆ ಸರಿಯಲ್ಲ ಎಂದು ಹೇಳಿದರು.




ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಮಾಹಿತಿಯ ಪ್ರಕಾರ, ದೇಶಾದ್ಯಂತ ದಲಿತ ಸಮುದಾಯಗಳ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಗಣನೀಯವಾಗಿ ಏರಿಕೆಯಾಗಿದೆ. ಎಸ್‌ಸಿ-ಎಸ್‌ಟಿ ಜನರ ಮೇಲಿನ ದೌರ್ಜನ್ಯ ಪ್ರಕರಣಗಳ ಒಟ್ಟು ಸಂಖ್ಯೆಯಲ್ಲಿ ವಾರ್ಷಿಕವಾಗಿ ಶೇ.1.2 ರಿಂದ 2.5 ರಷ್ಟು ಹೆಚ್ಚಳ ದಾಖಲಾಗುತ್ತಿದೆ. ಕರ್ನಾಟಕದಲ್ಲೂ ಶೋಷಿತ ಸಮುದಾಯಗಳ ಮೇಲಿನ ದೌರ್ಜನ್ಯದ ಗ್ರಾಫ್ ಮೇಲ್ಮುಖವಾಗಿದೆ ಎಂದು ದೂರಿದರು.

ವಾರ್ಷಿಕವಾಗಿ ರಾಜ್ಯದಲ್ಲಿ ಸರಾಸರಿ 2,000ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಒಟ್ಟಾರೆ ಪ್ರಕರಣಗಳ ಸಂಖ್ಯೆಯಲ್ಲಿ ಶೇ.5 ರಿಂದ 7 ರಷ್ಟು ಹೆಚ್ಚಳವಾಗಿರುವುದು ಕಳವಳಕಾರಿಯಾಗಿದೆ. ಜಿಲ್ಲೆಯಲ್ಲಿ ಕಳೆದ ವರ್ಷ 125 ದಲಿತರ ಮೇಲೆ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. 52 ಸಂತ್ರಸ್ತ ಕುಟುಂಬಗಳಿಗೆ ಹಾಗು 22 ಪಿಂಚಣಿದಾರರಿಗೆ ಸೇರಬೇಕಾದ 123 ಲಕ್ಷ ರೂ. ಪರಿಹಾರ ಹಣವನ್ನು ವಿತರಿಸಿಲ್ಲ ಎಂದು ಆರೋಪಿಸಿದರು.

ರಾಜ್ಯದಲ್ಲಿ ಅಂತರ್ಜಾತಿ ವಿವಾಹಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನಲೆ ಪ್ರೋತ್ಸಾಹ ಧನಕ್ಕಾಗಿ ಅರ್ಜಿಗಳ ಸಂಖ್ಯೆಯೂ ಏರಿಕೆಯಾಗಿದೆ. ಸಹಾಯ ಧನಕ್ಕಾಗಿ 2,198 ಅರ್ಜಿಗಳು ಸಲ್ಲಿಕೆಯಾಗಿದ್ದು ಇರುವರೆಗೂ ಅನುದಾನ ಮಂಜೂರಾಗಿಲ್ಲ. ಜಿಲ್ಲೆಯಲ್ಲಿ 12 ಕೋಟಿ ರೂ. ಪ್ರೋತ್ಸಾಹ ಧನ ವಿತರಣೆ ಬಾಕಿ ಇದೆ ಎಂದು ಹೇಳಿದರು.

ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಸಂಚಾಲಕಎಂ.ಜಿ.ಪೃಥ್ವಿ, ಸಹ ಸಂಚಾಲಕ ರಾಜುಸಿಗರೇಹಳ್ಳಿ, ಪ್ರಕಾಶ್, ಲಿಂಗರಾಜು, ಪ್ರಸನ್ನ ಕುಮಾರ್, ಮೀನಾಕ್ಷಿ, ರಮೇಶ್ ಹಾಜರಿದ್ದರು.

# ಕರವೇ ನಾರಾಯಣಗೌಡ ಹುಟ್ಟುಹಬ್ಬ

• ಪ್ರಜೋದಯ ವರದಿ

**ಅರಸೀಕೆರೆ:** ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷರಾದ ಟಿ.ಎ.ನಾರಾಯಣಗೌಡ ಅವರ 60ನೇ ಹುಟ್ಟುಹಬ್ಬವನ್ನು ಅವರ ಹುಟ್ಟೂರಾದ ಅರಸೀಕೆರೆಯಲ್ಲಿ ವಿಶೇಷವಾಗಿ ಆಚರಿಸುವ ಮೂಲಕ ತಾಲ್ಲೂಕು ಕರವೇ ಕಾರ್ಯಕರ್ತರು ಗಮನ ಸೆಳೆದರು.

ನಗರದ ಪಿ.ಪಿ. ವೃತ್ತದಲ್ಲಿ ಆಯೋಜಿಸಿದ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ತಾಲ್ಲೂಕು ಕರವೇ ಅಧ್ಯಕ್ಷ ಕಿರಣ್ ಕುಮಾರ್, ನಗರ ಅಧ್ಯಕ್ಷ ಸಂತೋಷ್ ಕುಮಾರ್, ಜಿಲ್ಲಾ ಉಪಾಧ್ಯಕ್ಷ ತುಳಸಿಗೌಡ ಸೇರಿ ನಾನಾ ರಾಜಕೀಯ ಪಕ್ಷಗಳ ಮುಖಂಡರು, ವಿವಿಧ ಸಂಘ- ಸಂಸ್ಥೆಗಳ ಪದಾಧಿಕಾರಿಗಳು ನಾರಾಯಣಗೌಡರ ಬಗ್ಗೆ ಗುಣಗಾನ ಮಾಡಿದರು.

ಬೃಹತ್ ಕೇಕ್ ಅನ್ನು ಕತ್ತರಿಸಿ ನಾರಾಯಣಗೌಡರ ಪರ ಜಯಘೋಷ ಕೂಗುತ್ತಾ ಅಭಿಮಾನಿಗಳು ನೆರೆದಿದ್ದ ಸಾರ್ವಜನಿಕರಿಗೆ ಸಿಹಿ ಹಾಗೂ ಉಪಹಾರವನ್ನು ಹಂಚಿದರಲ್ಲದೆ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್ ಬುಕ್ ಹಾಗೂ ಪರಿಕರಗಳನ್ನು ವಿತರಿಸುವುದರೊಂದಿಗೆ ತಮ್ಮ ನೆಚ್ಚಿನ ನಾಯಕನ ಹುಟ್ಟುಹಬ್ಬವನ್ನು ಆಚರಿಸಿದರು.



ಜೆಡಿಎಸ್ ಮುಖಂಡ ವಿವೇಕ್ ಲಾಯರ್ ಮಾತನಾಡಿ, ನಾರಾಯಣಗೌಡರು ವ್ಯಕ್ತಿಯಲ್ಲ ಅವರೊಂದು ಕರ್ನಾಟಕದ ಶಕ್ತಿ. ಗಡಿನಾಡ ಕನ್ನಡಿಗರ ಮನ ಗೆದ್ದ ಧೀಮಂತ ನಾಯಕರಾಗಿದ್ದಾರೆ. ಮುಂಬೈ-ಕರ್ನಾಟಕ ಹೈದರಾಬಾದ್-ಕರ್ನಾಟಕ ಭಾಗದ ಕನ್ನಡಿಗರ ಮನೆಮನೆಗಳಲ್ಲಿ ನಾರಾಯಣಗೌಡರ ಫೋಟೋ ಇರುವುದನ್ನು ನಾವು ಕಾಣಬಹುದೆಂದರು.

ತಾಲ್ಲೂಕು ಕರವೇ ಅಧ್ಯಕ್ಷ ಕಿರಣ್ ಕುಮಾರ್ ಮಾತನಾಡಿ, ನಾಡು, ನುಡಿ, ನೆಲ, ಜಲ ರಕ್ಷಣೆಯ ಕಾವಲುಗಾರ ನಾಡು ನುಡಿ ಅಭಿಮಾನದ ವಿಷಯದಲ್ಲಿ ಸಾಹುಕಾರ, ನಮ್ಮ ನೆಚ್ಚಿನ ನಾರಾಯಣಗೌಡರು ತಾಲ್ಲೂಕಿನ ಮಗನಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ. ನಾಡಿನ ಲಕ್ಷಾಂತರ ಯುವಕರಲ್ಲಿ ನಾಡು ನುಡಿ ನೆಲ ಜಲದ ಮಹತ್ವ ಹಾಗೂ ಅದರ ರಕ್ಷಣೆಯ ಕುರಿತು ಜನರಲ್ಲಿ ಹೋರಾಟದ ಕಿಚ್ಚು ಬೆಳೆಸಿದ ಕನ್ನಡಾಂಬೆಯ ಹೆಮ್ಮೆಯ ಪುತ್ರ ಎಂದರು.

ಜಿಲ್ಲಾ ಡಿಸಿಸಿ ಬ್ಯಾಂಕ್‌ನ ನಿರ್ದೇಶಕ ಗಂಗಾಧರ್, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಗಂಜಿಗೆರೆ ಚಂದ್ರಶೇಖರ್, ನಗರಸಭೆ ಮಾಜಿ ಸದಸ್ಯರಾದ ವೆಂಕಟಮುನಿ, ಕರವೇ ನಗರ ಅಧ್ಯಕ್ಷ ಸಂತೋಷ್, ಗೌರವಾಧ್ಯಕ್ಷ ಲಕ್ಷ್ಮೀಶ್, ಮುಖಂಡರಾದ ನವೀನ್ ಕುಮಾರ, ಗಂಗಾಧರ್, ಲೋಕೇಶ್, ರಾಘವೇಂದ್ರ, ರಕ್ಷಿತ್, ರಾಘು, ಸುನಿಲ್, ಮಂಜುನಾಥ್, ಕುಮಾರ್, ಮಹಿಳಾ ಅಧ್ಯಕ್ಷೆ ಕಮಲಮ್ಮ, ಬಾಣಾವರ ಅಧ್ಯಕ್ಷ ಪರಮೇಶ್ ಇತರರು ಉಪಸ್ಥಿತರಿದ್ದರು.

## ಸಕಲೇಶಪುರದ ಚಂಪಕನಗರ ಜನತಾ ವಸತಿ ಗೃಹ, ಕೋರ್ಟ್ ಹಿಂಭಾಗದ ರಸ್ತೆ ಕೆಸರುಮಯ

# ಪಟ್ಟಣದಲ್ಲಿ ಕಸದ ರಾಶಿ: ಅನಾರೋಗ್ಯ ಭೀತಿ

• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಚಂಪಕನಗರ ಜನತಾ ಕ್ವಾಟ್ರಸ್ ಹಾಗು ಕೋರ್ಟ್ ಹಿಂಭಾಗದ ರಸ್ತೆಯ ಬದಿಯಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಕಸದ ರಾಶಿಯಿಂದ ಸಾರ್ವಜನಿಕರು, ವಿದ್ಯಾರ್ಥಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ರಸ್ತೆ ಬದಿಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ, ಕೊಳೆತ ಆಹಾರ ಪದಾರ್ಥಗಳು ಹಾಗು ಗೃಹಬಳಕೆಯ ಕಸವನ್ನು ರಾಶಿ ಹಾಕಲಾಗಿರುವುದರಿಂದ ದುರ್ವಾಸನೆ ವ್ಯಾಪಿಸಿದ್ದು, ಸ್ಥಳೀಯ ನಿವಾಸಿಗಳು ಸಂಕಷ್ಟ ಎದುರಿಸುತ್ತಿದ್ದಾರೆ. ಮಳೆಗಾಲ ಆರಂಭವಾಗಿರುವ ಹಿನ್ನಲೆ ಸೊಳ್ಳೆ ಹಾಗು ನೊಣಗಳ ಉತ್ಪತ್ತಿ ಹೆಚ್ಚಾಗಿ ಡೆಂಗ್ಯೂ, ಮಲೇರಿಯಾ ಸೇರಿ ಸಾಂಕ್ರಾಮಿಕ ರೋಗಗಳ ಹರಡುವಿಕೆಯ ಆತಂಕ ಎದುರಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡರ ಬಣ) ಆರೋಪಿಸಿದೆ.

ಕಸದ ಸಮಸ್ಯೆ ಕುರಿತು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಕರವೇ ಕಾರ್ಯಕರ್ತರು, ಕಸದ ರಾಶಿಯನ್ನು ಕೂಡಲೇ ತೆರವುಗೊಳಿಸಿ, ನಿಯಮಿತ ಸ್ವಚ್ಛತಾ ಕಾರ್ಯ ಹಾಗು ಔಷಧ ಸಿಂಪಡಣೆ ಕೈಗೊಳ್ಳುವಂತೆ ಪುರಸಭೆ ಅಧಿಕಾರಿಗಳನ್ನು ಒತ್ತಾಯಿಸಿದರು.



ಈ ವೇಳೆ ಮಾತನಾಡಿದ ಕರವೇ ಕಾರ್ಯದರ್ಶಿ ಜೈಕುಮಾರ್ ಅವರು, ಸಾರ್ವಜನಿಕರ ಆರೋಗ್ಯದ ವಿಚಾರದಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯವನ್ನು ಸಹಿಸಲಾಗುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಎಚ್ಚೆತ್ತುಕೊಂಡು ಕಸ ತೆರವುಗೊಳಿಸಿ ಸ್ವಚ್ಛ ಪರಿಸರ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಕರವೇ ವತಿಯಿಂದ ಹೋರಾಟ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

ರೈತ ಘಟಕದ ಅಧ್ಯಕ್ಷ ವಸಂತ್ ಬೊಮ್ಮನಕೆರೆ ಮಾತನಾಡಿ, ಸ್ವಚ್ಛತೆ ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಸಾರ್ವಜನಿಕರ ಸಹಭಾಗಿತ್ವವೂ ಅಗತ್ಯ. ರಸ್ತೆ ಬದಿಯಲ್ಲಿ ಕಸದ ರಾಶಿ ಸಂಗ್ರಹವಾಗಿರುವುದು ಆಡಳಿತದ ನಿರ್ಲಕ್ಷ್ಯವನ್ನು ತೋರಿಸುತ್ತದೆ. ತಕ್ಷಣ ಶಾಶ್ವತ ಪರಿಹಾರ ಕಂಡುಕೊಂಡು, ಕಸ ವಿಲೇವಾರಿಗೆ ಸಮರ್ಪಕ ವ್ಯವಸ್ಥೆ ಕಲ್ಪಿಸಬೇಕು. ಇಲ್ಲವಾದರೆ ಸ್ಥಳೀಯ ನಿವಾಸಿಗಳೊಂದಿಗೆ ಸೇರಿ ಹೋರಾಟ ತೀವ್ರಗೊಳಿಸಲಾಗುವುದೆಂದು ಹೇಳಿದರು.

ಕರವೇ ಉಪಾಧ್ಯಕ್ಷ ಸುನಿಲ್ ಹಾಡ್ಲಹಳ್ಳಿ, ನಗರ ಘಟಕದ ಅಧ್ಯಕ್ಷ ಪ್ರಜ್ವಲ್, ಕಸಬಾ ಹೋಬಳಿ ಅಧ್ಯಕ್ಷ ಸಿದ್ದಾರ್ಥ್ ಪಟೇಲ್, ಯುವ ಘಟಕದ ಅಧ್ಯಕ್ಷ ಮಧು ಬೊಮ್ಮನಕೆರೆ, ಕಾರ್ಯಕರ್ತರಾದ ಅನಂತ್, ಸ್ವಾಮಿ ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK